ಇ-ಮೇಲ್: info@swabhimanisouharda.com
ವೆಬ್‌ಸೈಟ್ : www.swabhimanisouharda.com

# ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.

Reg No.JRB/RGN/33/1687/2009-10 ("A" Category Co-operative) GST No. : 29AAFAS0181E1ZL

ನೊಂದಾಯಿತ ಕಛೇರಿ: ನಂ.125, ಮೊದಲನೇ ಮಹಡಿ, ಕವಿ ಲಕ್ಷ್ಮೀಶ ರಸ್ತೆ (ಡಯಾಗನಲ್ ರಸ್ತೆ),
ಕೆನರಾ ಬ್ಯಾಂಕ್ ಪಕ್ಕ, ವಿ.ವಿ.ಪುರಂ, ಬೆಂಗಳೂರು-560 004
ದೂರವಾಣಿ ಸಂಖ್ಯೆ: 080-41314393, ಮೊಬೈಲ್ ಸಂಖ್ಯೆ: 9483004088/9483514393

## "ಸಂಪೂರ್ಣ ಗಣಕೀಕೃತ ಸಹಕಾರಿ"

### ಭದ್ರತಾ ಕಪಾಟುಗಳ ಸೌಲಭ್ಯದೊಂದಿಗೆ

### ಹವಾನಿಯಂತ್ರಿತ ಕಛೇರಿ

# 14ನೇ ವಾರ್ಷಿಕ ಸಾಮಾನ್ಯ ಸಭೆ ಆಹ್ವಾನ ಪತ್ರಿಕೆ ಮತ್ತು 2022-23ನೇ ಸಾಲಿನ ವಾರ್ಷಿಕ ವರದಿ

**ದಿನಾಂಕ: 17-09-2023**

**ಭಾನುವಾರ**

**ಸಮಯ: ಬೆಳಿಗ್ಗೆ: 10-30 ಗಂಟೆಗೆ**

ಸ್ಥಳ : ಶ್ರೀ ಸತ್ಯನಾರಾಯಣ ಸ್ವಾಮಿ ಕಲ್ಯಾಣ ಮಂಟಪ
ಸಜ್ಜನ್‌ರಾವ್ ಸರ್ಕಲ್, ವಿ.ವಿ. ಪುರಂ,
ಬೆಂಗಳೂರು-560 004

# ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.

## ಸಹಕಾರಿಯ ಆಡಳಿತ ಮಂಡಲಿ ಸದಸ್ಯರು



ಶ್ರೀ ಸದಾನಂದ ರೆಡ್ಡಿ ಬಿ ವಿ
ಅಧ್ಯಕ್ಷರು
9845090239



ಶ್ರೀ ಚೆನ್ನಕೇಶವುಲು ಸಿ
ಉಪಾಧ್ಯಕ್ಷರು
9986560904



ಶ್ರೀ ರಾಜಶೇಖರ ರೆಡ್ಡಿ ವೈ
ನಿರ್ದೇಶಕರು
9448066667



ಶ್ರೀ ಮುನಿಶಾಮಯ್ಯ ಎಂ
ನಿರ್ದೇಶಕರು
9448264817



ಶ್ರೀ ನಾಗೇಶ್ ರೆಡ್ಡಿ ಕೆ ಸಿ
ನಿರ್ದೇಶಕರು
9900555944



ಶ್ರೀ ನಂದಕಿಶೋರ್ ಜೆ
ನಿರ್ದೇಶಕರು
9880291213



ಡಾ. ರವೀಂದ್ರನಾಥ ರೆಡ್ಡಿ ಡಿ ಆರ್
ನಿರ್ದೇಶಕರು
9945168424



ಶ್ರೀ ತಿಮ್ಮಾರೆಡ್ಡಿ ಕೆ ಜೆ
ನಿರ್ದೇಶಕರು
9241115772



ಶ್ರೀ ಕೆ ಎನ್ ರಾಜು
ನಿರ್ದೇಶಕರು
9845075663



ಶ್ರೀಮತಿ ಸತ್ಯ ಎಂ ರೆಡ್ಡಿ
ನಿರ್ದೇಶಕರು
9448664467



ಶ್ರೀಮತಿ ಬೃಂದ ಡಿ ಎಸ್
ನಿರ್ದೇಶಕರು
9845983345



ಶ್ರೀ ಓಬುಲೇಶ ಎಸ್.
ನಿರ್ದೇಶಕರು
9844465999



ಶ್ರೀ ಜಯಶಂಕರ್ ಪ್ರಸಾದ್ ಪಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಪ್ರಭಾರ)
9483004088

# ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.

**Reg.No.JRB/RGN/33/1687/2009-10 ("A" Category Co-operative) GST No. : 29AAFAS0181E1ZL**
**ನೊಂದಾಯಿತ ಕಛೇರಿ: ನಂ.125, ಮೊದಲನೆ ಮಹಡಿ, ಕವಿ ಲಕ್ಷ್ಮೀಶ ರಸ್ತೆ (ಡಯಾಗನಲ್ ರಸ್ತೆ),**
**ಕೆನರಾ ಬ್ಯಾಂಕ್ ಪಕ್ಕ, ವಿ.ವಿ.ಪುರಂ, ಬೆಂಗಳೂರು–560 004.**
**ದೂರವಾಣಿ ಸಂಖ್ಯೆ : 080–41314393, ಮೊಬೈಲ್ ಸಂಖ್ಯೆ: 9483004088 / 9483514393**

## 14ನೇ ವಾರ್ಷಿಕ ಸಾಮಾನ್ಯ ಸಭೆ ಸೂಚನೆ ಮತ್ತು ಆಹ್ವಾನ ಪತ್ರಿಕೆ

**ಸನ್ಮಾನ್ಯ ಸದಸ್ಯರೇ,**

ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ:17–09–2023ರಂದು ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ.ಬಿ.ವಿ.ಸದಾನಂದರೆಡ್ಡಿಯವರ ಅಧ್ಯಕ್ಷತೆಯಲ್ಲಿ ಶ್ರೀ ಸತ್ಯನಾರಾಯಣ ಸ್ವಾಮಿ ಕಲ್ಯಾಣ ಮಂಟಪ, ಸಜ್ಜನ್‌ರಾವ್ ಸರ್ಕಲ್, ವಿ.ವಿ. ಪುರಂ, ಬೆಂಗಳೂರು–560 004, ಇಲ್ಲಿ ನಡೆಸಲಾಗುವುದೆಂದು ಸದಸ್ಯರೆಲ್ಲರಿಗೂ ಈ ಮೂಲಕ ತಿಳಿಸಲಾಗಿದೆ. ಸನ್ಮಾನ್ಯ ಸದಸ್ಯರೆಲ್ಲರೂ ಸಭೆಗೆ ತಪ್ಪದೇ ಹಾಜರಾಗಿ ತಮ್ಮ ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡುವುದರೊಂದಿಗೆ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಈ ಮೂಲಕ ಕೋರಲಾಗಿದೆ. 2022–23ನೇ ಸಾಲಿನ ಹಾಗೂ 14ನೇ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಮತ್ತು ಸದಸ್ಯರ ಅವಗಾಹನೆಗೆ ಟಿಪ್ಪಣಿಗಳನ್ನು ಸಹಕಾರಿಯ ವೆಬ್‌ಸೈಟ್ : www.swabhimanisouharda.comನಲ್ಲಿ ಪಡೆಯಬಹುದಾಗಿದೆ.

### ಸಭೆಯ ಕಾರ್ಯಕಲಾಪಗಳು

1. ಪ್ರಾರ್ಥನೆ.
2. ಸ್ವಾಗತ.
3. ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿ.
4. ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
5. ದಿನಾಂಕ:18.09.2022ರಂದು ನಡೆದ 13ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಅನುಮೋದಿಸಿ ದಾಖಲಿಸುವುದು.
6. 2022–23ನೇ ಸಾಲಿನ ವಾರ್ಷಿಕ ವರದಿ ಮಂಡನೆ ಮತ್ತು ಅಂಗೀಕಾರ.
7. 2022–23ನೇ ಸಾಲಿನ ಲೆಕ್ಕಪರಿಶೋಧನೆಗೊಂಡ ಲೆಕ್ಕಪತ್ರಗಳ ಹಾಗೂ ಲೆಕ್ಕಪರಿಶೋಧನಾ ವರದಿಯ ಅಂಗೀಕಾರ ಮತ್ತು ಲಾಭಾಂಶ ವಿಲೇವಾರಿ.
8. 2022–23ನೇ ಸಾಲಿನ ವಾಸ್ತವಿಕ ಖರ್ಚಿನ ಹೆಚ್ಚು/ಕಡಿಮೆಯ ಅನುಮೋದನೆ ಹಾಗೂ 2023–24 ಮತ್ತು 2024–25ನೇ ಸಹಕಾರಿ ವರ್ಷದ ಅಂದಾಜು ಆಯ–ವ್ಯಯಗಳ ಮಂಡನೆ ಮತ್ತು ಅಂಗೀಕಾರ.
9. 2023–24ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನೆಗೆ ಲೆಕ್ಕಪರಿಶೋಧಕರನ್ನು ನೇಮಿಸುವ ಕುರಿತು.
10. ಸಹಕಾರಿಗೆ ನಿವೇಶನ ಖರೀದಿಸಲು ಸಹಕಾರಿಯಲ್ಲಿ ಲಭ್ಯವಿರುವ ಮೀಸಲು ನಿಧಿಗಳನ್ನು ಬಳಸುವ ಕುರಿತು.
12. ಸದಸ್ಯರಿಂದ ಪ್ರಸ್ತಾಪಿಸಬಹುದಾದ ವಿಷಯಗಳ ಮೇಲೆ ಚರ್ಚೆ.
12. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸುವ ಇತರೆ ವಿಷಯಗಳು.
13. ವಂದನಾರ್ಪಣೆ.

ಸ್ಥಳ : ಬೆಂಗಳೂರು
ದಿನಾಂಕ : 19.08.2023

ಆಡಳಿತ ಮಂಡಲಿಯ ಆದೇಶದ ಮೇರೆಗೆ
**ಸಹಿ/-**
**(ಜಯಶಂಕರ್ ಪ್ರಸಾದ್ ಪಿ)**
ಮುಖ್ಯಕಾರ್ಯನಿರ್ವಹಣಾಧಿಕಾರಿ(ಪ್ರಭಾರ)

## ಸದಸ್ಯರ ಅವಗಾಹನೆಗೆ ಟಿಪ್ಪಣಿಗಳು

**ವಿಷಯ-4:** ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.

**ಟಿಪ್ಪಣಿ:** 2022-23ನೇ ಸಾಲಿನ 14ನೇ ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕ:19.08.2023ರ ನೋಟಿಸನ್ನು ಓದಿ ದಾಖಲು ಮಾಡಬಹುದಾಗಿದೆ.

**ವಿಷಯ-5:** ದಿನಾಂಕ:18.09.2022ರಂದು ನಡೆದ 13ನೇ ವಾರ್ಷಿಕ ಸಾಮಾನ್ಯ ಸಭೆ ನಡೆವಳಿಗಳನ್ನು ಓದಿ ಅನುಮೋದಿಸಿ ದಾಖಲಿಸುವುದು.

**ಟಿಪ್ಪಣಿ:** ದಿನಾಂಕ: 18.09.2022ರಂದು ಭಾನುವಾರ ಬೆಳಿಗ್ಗೆ 10-30 ಗಂಟೆಗೆ, ಸಹಕಾರಿಯ ಅಧ್ಯಕ್ಷರಾದ ಶ್ರೀ.ಬಿ.ವಿ.ಸದಾನಂದ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬಿ.ಅರಸೋಜಿರಾವ್ ಕಲ್ಯಾಣ ಮಂದಿರ, ನಂ. 9, ಮಿನರ್ವ ಸರ್ಕಲ್ ಹತ್ತಿರ, ಆರ್.ವಿ.ರೋಡ್, ವಿ.ವಿ. ಪುರಂ, ಬೆಂಗಳೂರು-560 004, ಇಲ್ಲಿ, ನಡೆದ ಸಹಕಾರಿಯ 13ನೇ ವಾರ್ಷಿಕ (2021-22ನೇ ಸಾಲಿನ) ಸಾಮಾನ್ಯ ಸಭೆಯ ನಡೆವಳಿಗಳ ದೃಢೀಕೃತ ಪ್ರತಿಯನ್ನು ದಿನಾಂಕ:19.08.2022ರಂದು ಸಹಕಾರಿಯ ಸೂಚನಾ ಫಲಕದಲ್ಲಿ ನಿಯಮಾನುಸಾರ ಪ್ರಕಟಿಸಲಾಗಿತ್ತು. ಸದರಿ ನಡೆವಳಿಗಳನ್ನು ಕುರಿತಂತೆ ಸದಸ್ಯರ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ದಿನಾಂಕ:26.09.2022ರೊಳಗೆ ಸಲ್ಲಿಸಲು ಕೋರಲಾಗಿತ್ತು. ನಡೆವಳಿಗಳನ್ನು ಕುರಿತಂತೆ ಯಾರಿಂದಲೂ ಯಾವುದೇ ಬಗೆಯ ಆಕ್ಷೇಪಣೆಗಳು ಬಂದಿರುವುದಿಲ್ಲ. ಆದುದರಿಂದ ಸದರಿ ನಡೆವಳಿಗಳನ್ನು ಅನುಮೋದಿಸಬಹುದಾಗಿದೆ.

**ವಿಷಯ-6:** 2022-23ನೇ ಸಾಲಿನ ವಾರ್ಷಿಕ ವರದಿ ಮಂಡನೆ ಮತ್ತು ಅಂಗೀಕಾರ.

**ಟಿಪ್ಪಣಿ:** ವರದಿ ಪುಸ್ತಕದ ಪುಟ ಸಂಖ್ಯೆ 8 ರಿಂದ 11 ರವರೆಗೆ ಮುದ್ರಿಸಿರುವ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ-7:** 2022-23ನೇ ಸಾಲಿನ ಲೆಕ್ಕಪರಿಶೋಧನೆಗೊಂಡ ಲೆಕ್ಕಪತ್ರಗಳ ಹಾಗೂ ಲೆಕ್ಕಪರಿಶೋಧನಾ ವರದಿಯ ಅಂಗೀಕಾರ ಮತ್ತು ಲಾಭಾಂಶ ವಿಲೇವಾರಿ.

**ಟಿಪ್ಪಣಿ:** ವರದಿ ಪುಸ್ತಕದ ಪುಟ ಸಂಖ್ಯೆ 12 ರಿಂದ 29ರ ವರೆಗೆ ಮುದ್ರಿಸಿರುವ 2022-23ನೇ ಸಾಲಿನ ಪರಿಶೋಧನೆಗೊಂಡ ಲೆಕ್ಕಪತ್ರಗಳ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಪುಟ ಸಂಖ್ಯೆ 30ರಲ್ಲಿನ ಲಾಭಾಂಶ ವಿಲೇವಾರಿಯನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ-8:** 2022-23ನೇ ಸಾಲಿನ ವಾಸ್ತವಿಕ ಖರ್ಚಿನ ಹೆಚ್ಚು/ಕಡಿಮೆಯ ಅನುಮೋದನೆ ಹಾಗೂ 2023-24 ಮತ್ತು 2024-25ನೇ ಸಹಕಾರಿ ವರ್ಷದ ಅಂದಾಜು ಆಯ-ವ್ಯಯಗಳ ಮಂಡನೆ ಮತ್ತು ಅಂಗೀಕಾರ.

**ಟಿಪ್ಪಣಿ:** ವರದಿ ಪುಸ್ತಕದ ಪುಟ ಸಂಖ್ಯೆ 31ರಲ್ಲಿ ಮುದ್ರಿಸಿರುವ 2022-23ನೇ ಸಾಲಿನ ವಾಸ್ತವಿಕ ಖರ್ಚಿನ ಹೆಚ್ಚು/ಕಡಿಮೆಯ ಹಾಗೂ 2023-24 ಮತ್ತು 2024-25ನೇ ಸಹಕಾರಿ ವರ್ಷದ ಅಂದಾಜು ಆಯ-ವ್ಯಯಗಳನ್ನು ಪರಿಶೀಲಿಸಿ/ಅಂಗೀಕರಿಸಿ ಅನುಮೋದಿಸಬಹುದಾಗಿದೆ.

**ವಿಷಯ-9:** 2023-24ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನೆಗೆ ಲೆಕ್ಕಪರಿಶೋಧಕರನ್ನು ನೇಮಿಸುವ ಕುರಿತು.

**ಟಿಪ್ಪಣಿ:** ಸಹಕಾರಿಯ 2023-24ನೇ ಸಾಲಿನ ಲೆಕ್ಕಪತ್ರಗಳ ಪರಿಶೋಧನೆಗೆ ಈ ಮುಂದೆ ಕಾಣಿಸಿದ ಒಟ್ಟು 3 ಲೆಕ್ಕಪರಿಶೋಧಕರು/ ಸಂಸ್ಥೆಗಳು ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದು, (1) ಶ್ರೀ.ಶಿವಕುಮಾರ್ ಹೆಚ್ ಇವರು ರೂ.1,35,000/-ಕ್ಕೆ (2) ಮೆ.ಬಿ.ಎನ್ ಸುಬ್ರಮಣ್ಯ & ಕೋ. ಇವರು ರೂ.1,75,000/-ಕ್ಕೆ, (3) ಮೆ. ಜಯತೀರ್ಥ & ಕೋ. ಇವರು ರೂ.1,60,000/-ಕ್ಕೆ, ಲೆಕ್ಕ ಪರಿಶೋಧನಾ ಶುಲ್ಕವಾಗಿ ಕೊಟೇಷನ್ ನೀಡಿರುತ್ತಾರೆ. ಸಭೆಯು ಸೂಕ್ತವೆಂದು ಕಂಡುಬಂದ ಲೆಕ್ಕಪರಿಶೋಧಕರ ನೇಮಕಾತಿಯನ್ನು ಮಾಡಬಹುದಾಗಿದೆ.

**ವಿಷಯ-10:** ಸಹಕಾರಿಗೆ ನಿವೇಶನ ಖರೀದಿಸಲು ಸಹಕಾರಿಯಲ್ಲಿ ಲಭ್ಯವಿರುವ ಮೀಸಲು ನಿಧಿಗಳನ್ನು ಬಳಸುವ ಕುರಿತು.

**ಟಿಪ್ಪಣಿ:** ಸಹಕಾರಿಗೆ ಅಗತ್ಯವಾದ ನಿವೇಶನ ಖರೀದಿಸಲು, ಕಟ್ಟಡ ನಿರ್ಮಾಣ ಮಾಡಲು ಹಣದ ಅವಶ್ಯಕತೆ ಇದ್ದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ಉಪನಿಯಮ-7(ಬಿ)ರ ಅನ್ವಯ ಮೀಸಲು

ನಿಧಿಯ ಶೇ.80ರ ವರೆಗೆ ಸಹಕಾರಿಯಲ್ಲಿ ಲಭ್ಯವಿರುವ ಮೀಸಲು ನಿಧಿಗಳನ್ನು ಬಳಸಲು ಅವಕಾಶವಿರುತ್ತದೆ. ಆದುದರಿಂದ ಈ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಿದ್ದು ತಾವೆಲ್ಲರೂ ಒಪ್ಪಿ, ಸಹಕಾರಿಯಲ್ಲಿರುವ ಮೀಸಲು ನಿಧಿ ಮತ್ತು ಕಟ್ಟಡ ನಿಧಿಗಳನ್ನು ಬಳಸಿ ಸಹಕಾರಿಗೆ ನಿವೇಶನ ಖರೀದಿಸಲು ಒಪ್ಪಿಗೆ ಸೂಚಿಸಿ, ಅಂಗೀಕರಿಸಿ ಆಡಳಿತ ಮಂಡಲಿಗೆ ಅನುಮತಿ ನೀಡಬಹುದಾಗಿದೆ.

## ವಿಶೇಷ ಸೂಚನೆಗಳು

1. ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸುವಾಗ ತಪ್ಪದೇ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಕಡ್ಡಾಯವಾಗಿ ತರುವುದು.
2. ಸಭೆಯಲ್ಲಿ ಚರ್ಚಿಸಲಿಚ್ಛಿಸುವ ವಿಷಯಗಳಿದ್ದಲ್ಲಿ ಅಂಥ ವಿಷಯಗಳನ್ನು 7(ಏಳು) ದಿನ ಮುಂಚಿತವಾಗಿ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ತಲುಪಿಸತಕ್ಕದ್ದು.
3. ಸದಸ್ಯರ ವಿಳಾಸ ಏನಾದರೂ ಬದಲಾವಣೆಯಾಗಿದ್ದಲ್ಲಿ ತಕ್ಷಣ ತಮ್ಮ ಹೊಸ ವಿಳಾಸವನ್ನು ಸಹಕಾರಿಗೆ ಲಿಖಿತವಾಗಿ ತಿಳಿಸತಕ್ಕದ್ದು.
4. ಸದಸ್ಯರು ಸಹಕಾರಿಯಲ್ಲಿ ತಮ್ಮ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ಐಡಿಯನ್ನು ನೊಂದಣಿ ಮಾಡಿಕೊಳ್ಳತಕ್ಕದ್ದು ಮತ್ತು ಬದಲಾವಣೆಗಳಿದ್ದಲ್ಲಿ ಲಿಖಿತವಾಗಿ ತಿಳಿಸತಕ್ಕದ್ದು.
5. ಸದಸ್ಯರು ಕಛೇರಿಗೆ ಬಂದು ತಮ್ಮ ಗುರುತಿನ ಚೀಟಿ, ಷೇರು ದೃಢೀಕರಣ ಪತ್ರಗಳನ್ನು ಮತ್ತು ಹಿಂದಿನ ಸಾಲಿನ ಲಾಭಾಂಶವನ್ನು ಪಡೆಯುವುದು.
6. ಸದಸ್ಯರು ಸಹಕಾರಿಯ ಯಾವುದೇ ಬಾಕಿಗಳಿಗೆ ಸುಸ್ತಿದಾರನಾಗಿದ್ದರೆ, ಹಿಂದಿನ ಐದು ಸಾಮಾನ್ಯ ಸಭೆಗಳ ಪೈಕಿ ಯಾವುದೇ ಎರಡು ಸಭೆಗಳಿಗೆ ಹಾಜರಾಗಿಲ್ಲದಿದ್ದರೆ ಹಾಗೂ ಹಿಂದಿನ ಐದು ಸಹಕಾರಿ ವರ್ಷಗಳಲ್ಲಿ ಯಾವುದೇ ಎರಡು ವರ್ಷಗಳಲ್ಲಿ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಾನ್ಯ ಕನಿಷ್ಠ ವ್ಯವಹಾರವನ್ನು ಮಾಡದಿದ್ದರೆ ಅಂತಹ ಸದಸ್ಯರು ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಲಿಯ ಚುನಾವಣೆಯಲ್ಲಿ ಮತದಾನ ಮಾಡಲು ಮುಂದಿನ ಒಂದು ವರ್ಷದವರೆಗೆ ಅನರ್ಹಗೊಳ್ಳುತ್ತಾರೆ.
7. ಮರಣ ಹೊಂದಿದ ಸದಸ್ಯರ ವಾರಸುದಾರರಿಗೆ ಸದಸ್ಯರ ಮರಣೋತ್ತರ ನಿಧಿಯಿಂದ ರೂ.10,000=00ಗಳನ್ನು ಪಾವತಿಸಲಾಗುವುದು, ಮರಣ ಹೊಂದಿದ ಸದಸ್ಯರ ವಾರಸುದಾರರು ಸಹಕಾರಿಗೆ ಅರ್ಜಿಯನ್ನು ಸಲ್ಲಿಸಿ ಪರಿಹಾರ ಮೊತ್ತವನ್ನು ಪಡೆಯಬಹುದು.
8. ಕ್ಯಾನ್ಸರ್ ಖಾಯಿಲೆಯ ಚಿಕಿತ್ಸೆಗಾಗಿ, ನೆರವಿನ ಅಗತ್ಯವಿರುವ ಸದಸ್ಯರು, ಅರ್ಜಿಗಳನ್ನು ಸಹಕಾರಿಗೆ ಸಲ್ಲಿಸಿ, ಗರಿಷ್ಠ ರೂ.25,000/-ಗಳ ನೆರವನ್ನು ಪಡೆಯಬಹುದು.
9. ಉಳಿತಾಯ ಖಾತೆಯಲ್ಲಿನ ದೈನಂದಿನ ಸರಾಸರಿ ಶಿಲ್ಕಿನ ಮೇಲೆ ವಾರ್ಷಿಕ ಶೇ.4ರವರೆಗೆ ಬಡ್ಡಿ ನೀಡಲಾಗುವುದು.
10. ಸಹಕಾರಿಯಲ್ಲಿ ಉಳಿತಾಯ ಖಾತೆ ಹೊಂದಿಲ್ಲದಿರುವಂತಂಹ ಸದಸ್ಯರು ಸಹಕಾರಿಯಿಂದ ಲಾಭಾಂಶವನ್ನು ಚೆಕ್ ಅಥವಾ ಎನ್ಇಎಫ್‌ಟಿ ಮೂಲಕ ಪಡೆಯಲು ಇಚ್ಚಿಸಿದ್ದಲ್ಲಿ ಸಹಕಾರಿಯು ನಿಗದಿಪಡಿಸಿದ ನಮೂನೆಯಲ್ಲಿ ಅವಶ್ಯಕ ವಿವರಗಳನ್ನು ನೀಡಿ, ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ ಮೂರು ವರ್ಷಗಳೊಳಗೆ ಪಡೆಯಲು ತಪ್ಪಿದ್ದಲ್ಲಿ, ಅಂತಹ ಲಾಭಾಂಶವನ್ನು ಮೂರು ವರ್ಷಗಳು ಕಳೆದ ನಂತರ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.
11. ವಾರ್ಷಿಕ ವರದಿ ಮತ್ತು ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಸದಸ್ಯರಾಗಿ 12ತಿಂಗಳು ಆಗಿಲ್ಲದವರಿಗೂ ಸಹ ಕಳುಹಿಸಲಾಗಿರುತ್ತದೆ, ಇದು ಅವರ ಅವಗಾಹನೆಗೆ ಮಾತ್ರ ಎಂಬುದಾಗಿ ತಿಳಿಯತಕ್ಕದ್ದು.
12. **ಸ್ವಾಭಿಮಾನಿ ಪ್ರತಿಭಾ ಪುರಸ್ಕಾರ :-** ಸದಸ್ಯರ ಮಕ್ಕಳು ಸನ್ 2023ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.85ರಷ್ಟು ಮತ್ತು ಹೆಚ್ಚಿನ ಅಂಕಗಳಿಸಿ ತೇರ್ಗಡೆಯಾದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಸದಸ್ಯರು ಅರ್ಜಿಗಳನ್ನು ದಿನಾಂಕ:05-09-2023ರೊಳಗಾಗಿ ದೃಢೀಕೃತ ಅಂಕಪಟ್ಟಿಯೊಂದಿಗೆ ಅರ್ಜಿಯನ್ನು ಸಹಕಾರಿಗೆ ಸಲ್ಲಿಸಲು ಕೋರಲಾಗಿದೆ.

## 5. ದಿನಾಂಕ: 18–09–2022ರಂದು ನಡೆದ 13ನೇ (2021–22ನೇ ಸಾಲಿನ) ವಾರ್ಷಿಕ ಸಾಮಾನ್ಯ ಸಭೆಯ ನಡೆವಳಿಗಳು:

ದಿನಾಂಕ : 18–09–2022ರಂದು ಭಾನುವಾರ ಬೆಳಿಗ್ಗೆ 10–30 ಗಂಟೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ.ಬಿ.ವಿ.ಸದಾನಂದ ರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ಬಿ.ಅರಸೋಜಿರಾವ್ ಕಲ್ಯಾಣ ಮಂದಿರ, ನಂ. 9, ಮಿನರ್ವ ಸರ್ಕಲ್ ಹತ್ತಿರ, ಆರ್.ವಿ.ರೋಡ್, ವಿ.ವಿ. ಪುರಂ, ಬೆಂಗಳೂರು–560 004 ಇಲ್ಲಿ ನಡೆದ ಸಹಕಾರಿಯ 13ನೇ ವಾರ್ಷಿಕ (2021–22ನೇ ಸಾಲಿನ) ಸಾಮಾನ್ಯ ಸಭೆಯ ನಡೆವಳಿಗಳು:

**ಸರ್ವಸದಸ್ಯರ ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ: 491**

**ವಿಷಯ : 1. ಪ್ರಾರ್ಥನೆ.**

ಠರಾವು : 13ನೇ ಸಾಮಾನ್ಯ ಸಭೆಯು ಕು.ಶೋಭಿತಾ ಗೌಡ ಇವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

**ವಿಷಯ : 2. ಸ್ವಾಗತ.**

ಠರಾವು : ಮಾನ್ಯ ಸದಸ್ಯರಾದ ಶ್ರೀ.ವೆಂಕಟೇಗೌಡ ಇವರು, ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಮತ್ತು ಬಂದಿರುವ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು ಮತ್ತು ಸಹಕಾರಿಯ ಅಧ್ಯಕ್ಷರನ್ನು, ಎಲ್ಲಾ ನಿರ್ದೇಶಕರನ್ನು ವೇದಿಕೆಗೆ ಆಹ್ವಾನಿಸಿದರು. ವೇದಿಕೆಯ ಮೇಲೆ ಆಸೀನರಾಗಿದ್ದಂಥ ಸಹಕಾರಿಯ ಅಧ್ಯಕ್ಷರಾದ ಶ್ರೀ.ಬಿ. ವಿ. ಸದಾನಂದ ರೆಡ್ಡಿಯವರು ಮತ್ತು ಆಡಳಿತ ಮಂಡಲಿಯ ಎಲ್ಲಾ ನಿರ್ದೇಶಕರನ್ನು ದೀಪ ಬೆಳಗಿಸುವುದರ ಮೂಲಕ ಸಾಮಾನ್ಯ ಸಭೆಯನ್ನು ಪ್ರಾರಂಭ ಮಾಡಬೇಕೆಂದು ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀ.ಬಿ. ವಿ. ಸದಾನಂದ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆಯ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನೆರವೇರಿಸಿಕೊಡಬೇಕೆಂದು ಕೋರಿದರು. ಅದರಂತೆ ಎಲ್ಲರೂ ದೀಪ ಬೆಳಗಿಸುವ ಮೂಲಕ ಸಭೆಯನ್ನು ಉದ್ಘಾಟಿಸಿದರು.

13ನೇ ವಾರ್ಷಿಕ ಸಾಮಾನ್ಯ ಸಭೆಯ ಪ್ರಯುಕ್ತ ಸದಸ್ಯರ ಕುಟುಂಬ ಸದಸ್ಯರಲ್ಲಿ ಸನ್ 2022ನೇ ಸಾಲಿನ ಎಸ್ ಎಸ್ ಎಲ್ ಸಿ ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಗರಿಷ್ಟ ಅಂಕ ಗಳಿಸಿದ ಪ್ರತಿಭಾವಂತ ವಿಧ್ಯಾರ್ಥಿಗಳಿಗೆ **"ಸ್ವಾಭಿಮಾನಿ ಪ್ರತಿಭಾ ಪುರಸ್ಕಾರ"** ನೀಡಿ ಸನ್ಮಾನಿಸಲಾಯಿತು.

ಮೆ.ನಾಟ್ಯ ವೇದಾಲಯ ರವರ, ತಂಡದಿಂದ ಶ್ರೀಮತಿ. ಗುರು ಜಯಂತಿ ನಟರಾಜನ್‌ರವರ ಮಾರ್ಗದರ್ಶನದಲ್ಲಿ ಸುಮಾರು 14 ಮಕ್ಕಳು ಭರತನಾಟ್ಯ ಪ್ರದರ್ಶನವನ್ನು ಬಹಳ ಅದ್ಭುತವಾಗಿ ನಡೆಸಿಕೊಡಲಾಗಿ ಎಲ್ಲಾ ಸದಸ್ಯರ ಪ್ರಶಂಸೆಗೆ ಪಾತ್ರರಾದರು. ಇವರೆಲ್ಲರಿಗೂ ಸಹ ಆಡಳಿತ ಮಂಡಲಿಯಿಂದ ಸನ್ಮಾನಿಸಲಾಯಿತು. ನಂತರ 13ನೇ ವಾರ್ಷಿಕ ಸಾಮಾನ್ಯ ಸಭೆಯು ಪ್ರಾರಂಭವಾಯಿತು

**ವಿಷಯ 3. ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿ.**

ಠರಾವು : ಮಾನ್ಯ ಸದಸ್ಯರಾದ ಶ್ರೀ.ವೆಂಕಟೇಗೌಡ ಇವರುಸಭೆಯನ್ನು ಉದ್ದೇಶಿಸಿ, ವರದಿ ಸಾಲಿನಲ್ಲಿ ದೈವಾಧೀನರಾಗಿ ನಮ್ಮನ್ನು ಅಗಲಿರುವ ಸದಸ್ಯರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವೆಂದು ಹೇಳುತ್ತಾ ಸಹಕಾರಿಗೆ ದೊರೆತ ಮಾಹಿತಿಯಂತೆ ಸದಸ್ಯರಾದ ::–1)ಶ್ರೀ. ಹೊನ್ನಶೆಟ್ಟಿ ಕೆ ಹೆಚ್ [ಸದಸ್ಯತ್ವ ಸಂಖ್ಯೆ: 348], 2)ಶ್ರೀ. ಶ್ರೀ. ಮಂಚೇಗೌಡ ಬಿ ಎಂ [ಸದಸ್ಯತ್ವ ಸಂಖ್ಯೆ: 1892], 3)ಶ್ರೀ. ರಂಗಯ್ಯ ಎನ್ [ಸದಸ್ಯತ್ವ ಸಂಖ್ಯೆ: 1307], 4)ಶ್ರೀ. ನಟರಾಜ ಬಿ [ಸದಸ್ಯತ್ವ ಸಂಖ್ಯೆ: 2315], 5)ಶ್ರೀ. ಚಿನ್ನಪ್ಪ ಸಿ [ಸದಸ್ಯತ್ವ ಸಂಖ್ಯೆ: 1515], 6)ಶ್ರೀ. ಸುಬ್ಬಣ್ಣ [ಸದಸ್ಯತ್ವ ಸಂಖ್ಯೆ: 2118] ಮತ್ತು ದಿನಾಂಕ:01.04.2022ರ ಬಳಿಕ ದೈವಾದೀನರಾದ, 1)ಶ್ರೀ. ಸತ್ಯಮೂರ್ತಿ ಎಸ್ ಆರ್ [ ಸದಸ್ಯತ್ವ ಸಂ. 1108], 2)ಶ್ರೀ. ನಾಗರಾಜ ಎಂ ಎನ್ [ಸದಸ್ಯತ್ವ ಸಂ. 2671], 3)ಶ್ರೀ. ಕೃಷ್ಣಪ್ಪ ಹೆಚ್ [ಸದಸ್ಯತ್ವ ಸಂ. 281] ಮತ್ತು 4)ಶ್ರೀ. ನಂಜಪ್ಪ ರೆಡ್ಡಿ [ಸದಸ್ಯತ್ವ ಸಂ. 859], ಇವರುಗಳು ದೈವಾಧೀನರಾಗಿರುತ್ತಾರೆಂದು ತಿಳಿಸುತ್ತಾ ಅವರ ನಾಮಿನಿದಾರರಿಗೆ ಮರಣೋತ್ತರ ನಿಧಿಯನ್ನು ಪಾವತಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಮೃತ ಸದಸ್ಯರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನುಅರ್ಪಿಸುತ್ತಾ ಅವರೆಲ್ಲರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಕುಟುಂಬ ಸದಸ್ಯರಿಗೆ, ಅಗಲಿಕೆಯ ನೋವನ್ನು ಭರಿಸುವ ಶಕ್ತಿ ಮತ್ತು

ಧೈರ್ಯವನ್ನು ನೀಡಲು ಭಗವಂತನಲ್ಲಿ ಪ್ರಾರ್ಥಿಸಿ, ಒಂದು ನಿಮಿಷ ಮೌನ ಆಚರಿಸಬೇಕೆಂದು ಸಭಿಕರಲ್ಲಿ ಮನವಿ ಮಾಡಲಾಗಿ, ಸಭೆಯು ಮೌನ ಆಚರಿಸುವ ಮೂಲಕ ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿತು.

**ವಿಷಯ : 4.ವಾರ್ಷಿಕ ಸಾಮಾನ್ಯ ಸಭೆಯ ನೊಟೀಸನ್ನು ಓದಿ ದಾಖಲು ಮಾಡುವುದು.**

ಠರಾವು:ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿಯವರಾದ ಶ್ರೀ.ಎಸ್.ಎಂ.ಪೂಜಾರಿ ಇವರು ವರದಿ ಪುಸ್ತಕದ ಪುಟ ಸಂಖ್ಯೆ–1ರಲ್ಲಿ ಮುದ್ರಿಸಿರುವ 13ನೇ ವಾರ್ಷಿಕ ಸಾಮಾನ್ಯ ಸಭೆಯ ನೊಟೀಸನ್ನು ಸಭೆಗೆ ಓದಿ ತಿಳಿಸಿದರು. ಅಂತೆಯೇ ವಾರ್ಷಿಕ ಸಾಮಾನ್ಯ ಸಭೆಯ ನೊಟೀಸನ್ನು ದಾಖಲು ಮಾಡಲು ಸಭೆಯು ಚಪ್ಪಾಳೆ ತಟ್ಟಿ ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ : 5.ದಿನಾಂಕ:28–11–2021ರಂದು ನಡೆದ 12ನೇ ವಾರ್ಷಿಕ ಸಾಮಾನ್ಯ ಸಭೆ ನಡೆವಳಿಗಳನ್ನು ಓದಿ ಅನುಮೋದಿಸಿ ದಾಖಲಿಸುವುದು.**

ಠರಾವು : ಸಹಕಾರಿಯ ವ್ಯವಸ್ಥಾಪಕರಾದ ಶ್ರೀ. ತಿರುಪಾಲ ರೆಡ್ಡಿ ಸಿ, ಇವರು ವಿಷಯವನ್ನು ಮಂಡಿಸಿ, ದಿನಾಂಕ:28–11–2021ರಂದು ಭಾನುವಾರ ಬೆಳಿಗ್ಗೆ 10–30 ಗಂಟೆಗೆ, ಸಹಕಾರಿಯ ಅಧ್ಯಕ್ಷರಾದ ಶ್ರೀ.ಬಿ.ವಿ.ಸದಾನಂದ ರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ಸಹಕಾರಿಯ ನೊಂದಾಯಿತ ಕಛೇರಿ ನಂ.125, ಡಯಾಗನಲ್ ರಸ್ತೆ, ವಿ ವಿ ಪುರಂ, ಬೆಂಗಳೂರು–560004, ಇಲ್ಲಿ, ಕೆಲವು ಸದಸ್ಯರು ಖುದ್ದಾಗಿ ಹಾಜರಾಗಿದ್ದು, ಹಲವಾರು ಸದಸ್ಯರು Video Conference/Virtual Meeting ಮೂಲಕ ಭಾಗವಹಿಸಿದ ಸಹಕಾರಿಯ 12ನೇ ವಾರ್ಷಿಕ (2021–22ನೇ ಸಾಲಿನ) ಸಾಮಾನ್ಯ ಸಭೆಯ ನಡೆವಳಿಗಳ ದೃಢೀಕೃತ ಪ್ರತಿಯನ್ನು ದಿನಾಂಕ: 29.11.2021ರಂದು ಸಹಕಾರಿಯ ಸೂಚನಾ ಫಲಕದಲ್ಲಿ ಮತ್ತು ಜಾಲತಾಣ www.swabhimanisouharda.com, ಇಲ್ಲಿ ನಿಯಮಾನುಸಾರ ಪ್ರಕಟಿಸಲಾಗಿ, ಸದರಿ ನಡೆವಳಿಗಳನ್ನು ಕುರಿತಂತೆ ಸದಸ್ಯರ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ದಿನಾಂಕ: 06.12.2021ರೊಳಗೆ ಸಲ್ಲಿಸಲು ಕೋರಲಾಗಿತ್ತು. ಸದರಿ ನಡೆವಳಿಗಳನ್ನು ಕುರಿತಂತೆ ಯಾರಿಂದಲೂ ಯಾವುದೇ ಬಗೆಯ ಆಕ್ಷೇಪಣೆಗಳು ಬಂದಿರುವುದಿಲ್ಲ ಎಂದು ತಿಳಿಸಿದರು. ಸದರಿ ನಡೆವಳಿಗಳನ್ನು ಸಹಕಾರಿ ವರದಿ ಪುಸ್ತಕದ ಪುಟ ಸಂಖ್ಯೆ 4 ರಿಂದ 8ರವರೆಗೆ ಮುದ್ರಿಸಲಾಗಿದ್ದು, ಸದರಿ ನಡೆವಳಿಗಳನ್ನು ಅನುಮೋದಿಸಬಹುದಾಗಿದೆಯೆಂದು ಕೋರಲಾಗಿ ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ 12ನೇ ವಾರ್ಷಿಕ ಸಾಮಾನ್ಯ ಸಭೆಯ ನಡೆವಳಿಗಳನ್ನು ಸರ್ವಾನುಮತದಿಂದ ಅಂಗೀಕರಿಸಿ ದಾಖಲಿಸಲು ಅನುಮೋದಿಸಿತು.

**ವಿಷಯ : 6.2021–22ನೇ ಸಾಲಿನ ವಾರ್ಷಿಕ ವರದಿ ಮಂಡನೆ ಮತ್ತು ಅಂಗೀಕಾರ.**

ಠರಾವು : ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ವಿ.ಸದಾನಂದ ರೆಡ್ಡಿಯವರು ವರದಿ ಪುಸ್ತಕದ ಪುಟ ಸಂಖ್ಯೆ 9ರಿಂದ 15ರವರಗೆ ಮುದ್ರಿಸಿರುವ 2021–22 13ನೇ ಸಾಲಿನ ವಾರ್ಷಿಕ ವರದಿಯನ್ನು ಸವಿಸ್ತಾರವಾಗಿ ಓದಿ ಪ್ರತಿಯೊಂದು ಅಂಶವನ್ನು ಸಭೆಗೆ ವಿವರಿಸಿ ಹೇಳಿದರು. ವರದಿಯ ಎಲ್ಲಾ ಅಂಶಗಳನ್ನು ಆಲಿಸಿದ ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ 2021–22ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ : 7.2021–22ನೇ ಸಾಲಿನ ಲೆಕ್ಕಪರಿಶೋಧನೆಗೊಂಡ ಲೆಕ್ಕಪತ್ರಗಳ ಹಾಗೂ ಲೆಕ್ಕಪರಿಶೋಧನಾ ವರದಿಯ ಅಂಗೀಕಾರ ಮತ್ತು ಲಾಭಂಶ ವಿಲೇವಾರಿ.**

ಠರಾವು : ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಿ.ಚೆನ್ನಕೇಶವುಲು ರವರು ವಿಷಯವನ್ನು ಮಂಡಿಸುತ್ತಾ, ಸಹಕಾರಿಯ 2021–22ನೇ ಸಾಲಿನ ಲೆಕ್ಕಪರಿಶೋಧನೆಯಾಗಿರುವ ಲೆಕ್ಕಪತ್ರಗಳ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ವರದಿ ಪುಟ ಸಂಖ್ಯೆ 16ರಿಂದ 32ರವರೆಗೆ ಮುದ್ರಿಸಿದ್ದು ಅದರ ಪ್ರಕಾರ 2021–22ನೇ ಸಾಲಿನಲ್ಲಿ ಸಹಕಾರಿಯು ರೂ.1,81,07,900.13ಗಳಷ್ಟು ನಿವ್ವಳ ಲಾಭ ಗಳಿಸಿದ್ದು, ಸದರಿ ಲಾಭವನ್ನು ಯಾವ ರೀತಿ ವಿಲೆ ಮಾಡಬಹುದಾಗಿದೆ ಎಂಬ ಬಗೆಗೆ ವರದಿ ಪುಸ್ತಕದ ಪುಟ ಸಂಖ್ಯೆ 33ರಲ್ಲಿ ಮುದ್ರಿಸಿರುವಂತೆ ಆಡಳಿತ ಮಂಡಲಿ ಶಿಫಾರಸ್ಸು ಮಾಡಿರುತ್ತದೆ, ಸದರಿ ಶಿಫಾರಸ್ಸನ್ನು ಸಭೆಯು ಅಂಗೀಕರಿಸಬಹುದೆಂದು ಕೋರಲಾಗಿ ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಿತು.

**ವಿಷಯ : 8.2021–22ನೇ ಸಾಲಿನ ವಾಸ್ತವಿಕ ಖರ್ಚಿನ ಹೆಚ್ಚು /ಕಡಿಮೆಯ ಅನುಮೋದನೆ ಹಾಗೂ 2022–23ನೇ ಮತ್ತು 2023–24ನೇ ಸಾಲಿನ ಅಂದಾಜು ಆಯ–ವ್ಯಯಗಳ ಮಂಡನೆ ಮತ್ತು ಅಂಗೀಕಾರ.**

ಠರಾವು : ಸಹಕಾರಿಯ ಮಾನ್ಯ ಸದಸ್ಯರಾದ ಶ್ರೀ. ಕೃಷ್ಣಾರೆಡ್ಡಿ, ಇವರು ವಿಷಯವನ್ನು ಮಂಡಿಸುತ್ತಾ ವರದಿ ಪುಸ್ತಕದ ಪುಟ ಸಂಖ್ಯೆ 34ರಲ್ಲಿ ಮುದ್ರಿಸಿರುವಂತೆ 2021–22ನೇ ಸಾಲಿನ ವಾಸ್ತವಿಕ ಖರ್ಚಿನ ಹೆಚ್ಚು/ ಕಡಿಮೆಯ ಅನುಮೋದನೆ ಹಾಗೂ 2022–23ನೇ ಮತ್ತು 2023–24ನೇ ಸಹಕಾರಿ ವರ್ಷದ ಅಂದಾಜು ಆಯ–ವ್ಯಯಗಳನ್ನು ಸಭೆಗೆ ಓದಿ ತಿಳಿಸಿದರು. ಎಲ್ಲಾ ಅಂಶಗಳನ್ನು ಆಲಿಸಿದ ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ : 9.2022–23ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನೆಗೆ ಲೆಕ್ಕಪರಿಶೋಧಕರನ್ನು ನೇಮಿಸುವ ಕುರಿತು.**

ಠರಾವು : ಸಹಕಾರಿಯ ನಿರ್ದೇಶಕರಾದ ಶ್ರೀ.ತಿಮ್ಮಾರೆಡ್ಡಿ ಕೆ ಜೆ ಇವರು ಸಹಕಾರಿಯ 2022–23ನೇ ಸಾಲಿನ ಲೆಕ್ಕ ಪತ್ರಗಳ ಪರಿಶೋಧನೆಯನ್ನು ನಡೆಸಲು ಒಟ್ಟು 3 ಲೆಕ್ಕಪರಿಶೋಧನಾ ಸಂಸ್ಥೆಗಳು ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದು, ಅವರು ಕೋರಿದ ಶುಲ್ಕಗಳ ವಿವರಗಳನ್ನು ಸದರಿ ವರದಿ ಪುಸ್ತಕದ ಪುಟ ಸಂಖ್ಯೆ 2ರಲ್ಲಿ ಮುದ್ರಿಸಲಾಗಿದೆಯೆಂದು ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಪರಿಶೀಲಿಸಿದ ಬಳಿಕ, ಶ್ರೀ. ಸೋಮೇಶ್ ಎನ್ ಎನ್, ಚಾರ್ಟರ್ಡ್ ಅಕೌಂಟೆಂಟ್ ಇವರನ್ನು, ರೂ. 1,35,000/–ಗಳನ್ನು ಶುಲ್ಕ ನಿಗದಿ ಪಡಿಸಿ, 2022–23ನೇ ಸಾಲಿಗೆ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡ ಬಹುದಾಗಿದೆಯೆಂದು ಸಭೆಗೆ ಹೇಳಿದರು. ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ ಶ್ರೀ. ಸೋಮೇಶ್ ಎನ್ ಎನ್, ಚಾರ್ಟರ್ಡ್ ಅಕೌಂಟೆಂಟ್ ಇವರನ್ನು 2022–23ನೇ ಸಾಲಿಗೆ ಲೆಕ್ಕಪರಿಶೋಧಕರನ್ನಾಗಿ ನೇಮಿಸಲು ಮತ್ತು ಅವರಿಗೆ ಲೆಕ್ಕಪರಿಶೋಧನಾ ಶುಲ್ಕ ರೂ.1,35,000–00 ಗಳನ್ನು ನಿಗದಿಪಡಿಸಲು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ : 10. ಸಹಕಾರಿಯ ಸ್ವಂತ ಕಟ್ಟಡಕ್ಕಾಗಿ ಬೇಕಾದ ಸೂಕ್ತವಾದ ನಿವೇಶನವನ್ನು ಖರೀದಿಸಿರುವ ಕುರಿತು ಸಭೆಯ ಅನುಮೋದನೆ.**

ಠರಾವು : ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಿ.ಚೆನ್ನಕೇಶವುಲು ಇವರುಸಭೆಯನ್ನು ಉದ್ದೇಶಿಸಿ, ಸಹಕಾರಿಯು ಸ್ವಂತ ಕಟ್ಟಡಕ್ಕಾಗಿ ಬೇಕಾದ ಸೂಕ್ತವಾದ ನಿವೇಶನ ಖರೀದಿಸಲು ಹಿಂದಿನ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಿದ್ದು ತಮಗೆಲ್ಲ ತಿಳಿದಿರುವ ವಿಷಯವೇ ಆಗಿರುತ್ತದೆ. ಈ ಕುರಿತು ಸದಸ್ಯರಲ್ಲಿಯೂ ಸಹ ಸೂಕ್ತ ನಿವೇಶನದ ಲಭ್ಯತೆಯನ್ನು ಕುರಿತು ಮಾಹಿತಿಯನ್ನು ನೀಡುವಂತೆ ಮನವಿಯನ್ನು ಮಾಡಲಾಗಿತ್ತು. ಅದರಂತೆ ಸಹಕಾರಿಗೆ ಬೆಂಗಳೂರಿನ ಬನಶಂಕರಿ ಆರನೇ ಹಂತದಲ್ಲಿ ಒಂದೊಂದು 360 ಚದರ ಮೀಟರ್‌ಗಳ ಅಳತೆ ಇರುವ 2 ನಿವೇಶನಗಳನ್ನು ಖರೀದಿಸಲಾಗಿದೆಯೆಂದು, ಸದರಿ ವಿವರಗಳನ್ನು ವರದಿ ಪುಸ್ತಕದ ಪುಟ ಸಂಖ್ಯೆ–12ರಲ್ಲಿ ಮುದ್ರಿಸಲಾಗಿದ್ದು ಸಭೆಯು ಪರಿಶೀಲಿಸಿ, ಒಪ್ಪಿ, ಅಂಗೀಕರಿಸಿ ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ ಅನುಮೋದಿಸಬಹುದಾಗಿದೆ ಎಂದು ಕೋರಿದರು. ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ : 11. ಸಹಕಾರಿಯಲ್ಲಿ ವಿವಿಧ ಹುದ್ದೆಗಳಿಗಾಗಿ ನೇರ ನೇಮಕಾತಿ ಮಾಡಿರುವ ಕುರಿತು ಸಭೆಯ ಅನುಮೋದನೆ.**

ಠರಾವು : ಸಹಕಾರಿಯ ಮಾನ್ಯ ಸದಸ್ಯರಾದ ಶ್ರೀ. ಕೃಷ್ಣಾರೆಡ್ಡಿ, ಇವರು ಸಹಕಾರಿಯಲ್ಲಿ ವಿವಿಧ ಹುದ್ದೆಗಳಿಗಾಗಿ ನೇರ ನೇಮಕಾತಿ ಮಾಡಿರುವ ಕುರಿತು ವರದಿ ಪುಸ್ತಕದ ಪುಟ ಸಂಖ್ಯೆ 14ರಲ್ಲಿ ಮುದ್ರಿಸಿರುವ ವಿವರಗಳನ್ನು ಪರಿಶೀಲಿಸಿ/ಅಂಗೀಕರಿಸಿ ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ ಅನುಮೋದಿಸಬಹುದಾಗಿದೆ ಎಂದು ಕೋರಿದರು. ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ ಸರ್ವಾನುಮತದಿಂದ ಅಂಗೀಕರಿಸಲಾಯಿತು.

**ವಿಷಯ : 12. ಸದಸ್ಯರಿಂದ ಪ್ರಸ್ತಾಪಿಸಬಹುದಾದ ವಿಷಯಗಳ ಮೇಲೆ ಚರ್ಚೆ.**

ಠರಾವು : ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿಯವರಾದ ಶ್ರೀ. ಎಸ್ ಎಂ ಪೂಜಾರಿ ಇವರು ಸಭೆಯಲ್ಲಿ ಪ್ರಸ್ತಾಪಿಸಲು ಯಾವುದೇ ಸದಸ್ಯರೂ ಪ್ರಸ್ತಾವನೆಯನ್ನು ಕಳುಹಿಸಿಲ್ಲವೆಂಬುದಾಗಿ ಹೇಳಿದರು.

**ವಿಷಯ : 13. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸುವ ಇತರೆ ವಿಷಯಗಳು.**

ಠರಾವು : ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿಯವರಾದ ಶ್ರೀ. ಎಸ್ ಎಂ ಪೂಜಾರಿ ಇವರು ಅಧ್ಯಕ್ಷರ ಅಪ್ಪಣೆ ಪಡೆದು, ಕೆಲವು ಸದಸ್ಯರು ಅನ್ಯ ಕಾರಣಗಳಿಂದ ಈ ದಿನದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲವೆಂದು ಸಹಕಾರಿಗೆ ಮೌಖಿಕವಾಗಿ, ದೂರವಾಣಿ ಮೂಲಕ ಗೈರು ಹಾಜರಿಗೆ ಅನುಮತಿ ಕೋರಿರುತ್ತಾರೆಂದು ಮತ್ತು ಅಂತಹ ಸದಸ್ಯರ ಗೈರು ಹಾಜರಿಗೆ ಸಭೆಯು ಅನುಮತಿ ನೀಡಬೇಕೆಂದು ಸಭೆಯಲ್ಲಿ ಕೋರಲಾಗಿ, ಸಭೆಯು ಚಪ್ಪಾಳೆ ತಟ್ಟುವುದರ ಮೂಲಕ ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ : 14. ವಂದನಾರ್ಪಣೆ.**

ಠರಾವು : ಸಹಕಾರಿಯ ಸದಸ್ಯರಾದ ಶ್ರೀ ವೆಂಕಟೇ ಗೌಡ ಇವರು, ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರಿಗೆ, ನಿರ್ದೇಶಕ ಮಂಡಲಿಯ ಎಲ್ಲಾ ಸದಸ್ಯರಿಗೆ ಮತ್ತು ವಿಶೇಷವಾಗಿ ಸಹಕಾರಿಯ ಸರ್ವಾಂಗೀಣ ಅಭಿವೃದ್ಧಿಗೆ ಸ್ಫೂರ್ತಿದಾಯಕವಾಗಿರುವ ಹಾಗೂ ನಿರಂತರವಾಗಿ ಸಲಹೆ ಸೂಚನೆಗಳನ್ನು ನೀಡುತ್ತಿರುವ ಶ್ರೀ ಬಿ.ವಿ.ಮಲ್ಲಾರೆಡ್ಡಿ ಹಾಗೂ ಶ್ರೀ ಡಿ.ಆರ್.ಗೋಪಿನಾಥ್ ರವರಿಗೆ, ಸಹಕಾರಿಯ ಸಿಬ್ಬಂದಿ ವರ್ಗದವರಿಗೆಲ್ಲರಿಗೂ, ಕಾನೂನು ಸಲಹೆಗಾರರಿಗೆ, ಆಸ್ತಿ ಮತ್ತು ವಾಹನ ಮೌಲ್ಯಮಾಪಕರಿಗೆ, ಹಾಗೂ ಸಹಕಾರಿಯ ಲೆಕ್ಕ ಪತ್ರಗಳ ಲೆಕ್ಕ ಪರಿಶೋಧನೆ ಮಾಡಿರುವ ಶ್ರೀ.ಸೋಮೇಶ್ ಎನ್ ಎನ್, ಇವರಿಗೆ ಸ್ವಾಭಿಮಾನಿ ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ಸದಸ್ಯರ ಮಕ್ಕಳಿಗೆ, ಭರತನಾಟ್ಯ ಕಾರ್ಯಕ್ರಮವನ್ನು ನಡೆಸಿಕೊಟ್ಟ ಮೆ. ನಾಟ್ಯ ವೇದಾಲಯ ತಂಡದವರಿಗೂ, ಈ ದಿನ ಸಭೆಯನ್ನು ಯಶಸ್ವಿಗೊಳಿಸಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದವರಿಗೆಲ್ಲರಿಗೂ ಮತ್ತು ಸಂಸ್ಥೆಯ ಬೆಳವಣಿಗೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ನೀಡುತ್ತಿರುವವರಿಗೆಲ್ಲರಿಗೂ ಪ್ರತ್ಯೇಕವಾಗಿ ವಂದನೆ ಸಲ್ಲಿಸುವುದರೊಂದಿಗೆ, ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/– | ಸಹಿ/– |
| **(ಶ್ರೀ ಸದಾನಂದ ರೆಡ್ಡಿ ಬಿ.ವಿ.)** | **ಶ್ರೀ. ಎಸ್ ಎಂ ಪೂಜಾರಿ** |
| ಅಧ್ಯಕ್ಷರು | ಮು.ಕಾ.ನಿ.ಅಧಿಕಾರಿ (ಪ್ರಭಾರ) |

* * *

## 6. 2022-23ನೇ ಸಾಲಿನ ಹಾಗೂ 14ನೇ ವಾರ್ಷಿಕ ವರದಿ

ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನು ಸ್ವಾಗತಿಸುತ್ತಾ 2022-23ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ಸಹಕಾರಿಯ 2022-23ನೇ ಸಾಲಿನಲ್ಲಿ ಠೇವಣಿ ಸಂಗ್ರಹಣೆ, ಸಾಲ ಮತ್ತು ಮುಂಗಡಗಳ ವಿತರಣೆ, ಹೂಡಿಕೆಗಳು, ಸಾಲ ವಸೂಲಾತಿ ಇತ್ಯಾದಿ ವಿಭಾಗಗಳಲ್ಲಿ ಉತ್ತಮ ಅಭಿವೃದ್ಧಿ ದಾಖಲಿಸಿರುತ್ತದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ವರ್ಷಾರಂಭದಲ್ಲಿ ಸದಸ್ಯರ ಸಂಖ್ಯೆ 2743 ರಷ್ಟಿದ್ದು, ವರದಿ ಸಾಲಿನಲ್ಲಿ ಸದಸ್ಯತ್ವವನ್ನು ಹಿಂಪಡೆದವರ ಸಂಖ್ಯೆ 43 ಮತ್ತು ಹೊಸದಾಗಿ ಸದಸ್ಯತ್ವ ಪಡೆದವರ ಸಂಖ್ಯೆ 65ನ್ನು ಪರಿಗಣಿಸಿ ವರ್ಷಾಂತ್ಯಕೆ ಒಟ್ಟು ಸದಸ್ಯರ ಸಂಖ್ಯೆ 2765 ಇರುತ್ತದೆ. ವರ್ಷಾರಂಭದಲ್ಲಿ ರೂ.787.75 ಲಕ್ಷಗಳಷ್ಟಿದ್ದ ಷೇರು ಬಂಡವಾಳ, ವರ್ಷಾಂತ್ಯಕ್ಕೆರೂ. 738.05ಲಕ್ಷಗಳಾಗಿದ್ದು ವರದಿಯ ಸಾಲಿನಲ್ಲಿ ರೂ.49.70ಲಕ್ಷ ಷೇರು ಬಂಡವಾಳ ಕಡಿಮೆಯಾಗಿರುತ್ತದೆ. ವರ್ಷಾರಂಭದಲ್ಲಿ ರೂ.6205.13 ಲಕ್ಷಗಳಷ್ಟಿದ್ದ ಠೇವಣಿ ವರ್ಷಾಂತ್ಯಕ್ಕೆ ಒಟ್ಟು ಠೇವಣಿ ರೂ.6447.80 ಲಕ್ಷಗಳಾಗಿರುತ್ತದೆ. ಅದೇ ರೀತಿಯಾಗಿ ವರ್ಷಾರಂಭದಲ್ಲಿ ರೂ.8228.12 ಲಕ್ಷಗಳಷ್ಟಿದ್ದ ದುಡಿಯುವ ಬಂಡವಾಳವು ವರ್ಷಾಂತ್ಯಕ್ಕೆ ರೂ.8598.92 ಲಕ್ಷಗಳಾಗಿರುತ್ತದೆ. ಸಾಲಾಂತ್ಯಕ್ಕೆ ನೀಡಿರುವ ಒಟ್ಟು ಸಾಲ ಮತ್ತು ಮುಂಗಡಗಳ ಮೊತ್ತ ರೂ.4756.58 ಲಕ್ಷಗಳಾಗಿರುತ್ತದೆ.

ಸಾಲದ ಕಂತುಗಳನ್ನು ಪ್ರತಿ ತಿಂಗಳು ನಿಗದಿತ ಅವಧಿಯೊಳಗೆ ಮರುಪಾವತಿ ಮಾಡಿದ ಸದಸ್ಯರಿಗೆ ಬಡ್ಡಿದರದಲ್ಲಿ ಶೇ.2 ರವರೆಗೆ ರಿಯಾಯಿತಿ (Rebate)ಯನ್ನು ಆಡಳಿತ ಮಂಡಲಿಯು ವರದಿ ಸಾಲಿನಲ್ಲಿಯೂ ಸಹ ಸದರಿ ರಿಯಾಯಿತಿಯನ್ನು ಮುಂದುವರೆಸಲಾಗಿರುತ್ತದೆ. ವರದಿ ಸಾಲಿನಲ್ಲಿ ಹೀಗೆ ಬಡ್ಡಿಯಲ್ಲಿ ನೀಡಿದ ಒಟ್ಟು ರಿಯಾಯಿತಿ ಮೊತ್ತ ರೂ.8,66,829.00ಗಳಾಗಿರುತ್ತದೆ. ಹಿಂದಿನ ಸಾಲಿನಲ್ಲಿ ಈ ಮೊತ್ತವು ರೂ.4,66,165.00 ಗಳಾಗಿತ್ತು. ಅದೇ ರೀತಿ, ಸಾಲದ ಕಂತುಗಳನ್ನು ಕ್ಲುಪ್ತ ಸಮಯದಲ್ಲಿ ಮರುಪಾವತಿ ಮಾಡದ ಸದಸ್ಯರಿಗೆ ವಾರ್ಷಿಕ ಶೇ.2ರಷ್ಟು ದಂಡದ ಬಡ್ಡಿಯನ್ನು ವಿಧಿಸಲಾಗುತ್ತಿದ್ದು, ವರದಿ ಸಾಲಿನಲ್ಲಿ, ರೂ.18,18,197.00ಗಳಷ್ಟು ದಂಡದ ಬಡ್ಡಿಯನ್ನು ವಸೂಲು ಮಾಡಲಾಗಿದೆ. ಕಳೆದ ವರ್ಷ, ಈ ಮೊತ್ತವು ರೂ.16,28,086.00ಗಳಷ್ಟಿತ್ತು. ಸನ್ 2022-23ನೇ ಸಾಲಿನಲ್ಲಿ ಸಹಕಾರಿಯು ಗಳಿಸಿದ ಲಾಭದಲ್ಲಿ ಅನುತ್ಪಾದಕ ಆಸ್ತಿಗಳಿಂದ ಬರತಕ್ಕ ಬಡ್ಡಿಯ ಬಗ್ಗೆ ರೂ.96.53ಲಕ್ಷಗಳನ್ನು ತೆಗೆದಿರಿಸಲಾಗಿದೆ. ಸನ್ 2021-22ರ ಸಾಲಾಂತ್ಯಕ್ಕೆ ಸದರಿ ಮೊತ್ತವು ರೂ.125.40 ಲಕ್ಷಗಳಷ್ಟು ಇದ್ದದ್ದು, ವರದಿ ಸಾಲಿನಲ್ಲಿ ಸದರಿ ಬಾಕಿಯಲ್ಲಿ ರೂ.41.68 ಲಕ್ಷಗಳಷ್ಟು ಬಡ್ಡಿಯನ್ನು ವಸೂಲು ಮಾಡಲಾಗಿದೆ. ಸನ್ 2022-23ರ ಸಾಲಾಂತ್ಯಕ್ಕೆ ಸದರಿ ಮೊತ್ತವು ರೂ.180.25 ಲಕ್ಷಗಳಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಅಂದರೆ 2023-24ರಲ್ಲಿ, ಸದರಿ ವಸೂಲಾಗಬೇಕಾದ ಬಡ್ಡಿಯಲ್ಲಿ ದಿನಾಂಕ:31-03-2023ರ ನಂತರ 30.06.2023ರವರೆಗೆ ರೂ.20.40 ಲಕ್ಷಗಳಷ್ಟು ಬಡ್ಡಿಯನ್ನು ವಸೂಲಿ ಮಾಡಲಾಗಿದ್ದು, ಹಾಲಿ ರೂ.159.85ಲಕ್ಷಗಳನ್ನು ವಸೂಲಿ ಮಾಡಲು ಎಲ್ಲಾ ರೀತಿಯ ಕ್ರಮ ವಹಿಸಲಾಗಿದ್ದು ಈ ನಿಟ್ಟಿನಲ್ಲಿ ಸೆಕ್ಯೂರಿಟೈಷನ್ ಆಕ್ಟ್ (SARFAESI ACT) ಅನ್ನು ಬಳಸಲು ನಮ್ಮ ಸಹಕಾರಿಯನ್ನು CERSAIನಲ್ಲಿ ರಿಜಿಸ್ಟರ್ ಮಾಡಿಸಲಾಗಿದೆ ಹಾಗೂ ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತದೊಂದಿಗೆ ಸಹಕಾರಿಯ ನಿಷ್ಕ್ರಿಯ ಹೂಡಿಕೆಗಳನ್ನು ವಾಪಾಸ್ಸು ಪಡೆಯಲು, ಸಂಬಂಧಪಟ್ಟ ಎಲ್ಲಾ ಸಂಸ್ಥೆಗಳೊಡನೆ, ತಕ್ಕುದಾದ ಕ್ರಮಗಳನ್ನು ನಮ್ಮ ಸಹಕಾರಿಯು ತೆಗೆದುಕೊಂಡಿದ್ದು ಶೀಘ್ರದಲ್ಲಿಯೇ ಒಂದು ಉತ್ತಮ ಫಲಿತಾಂಶವನ್ನು ನಾವು ಅಪೇಕ್ಷಿಸುತ್ತಿದ್ದೇವೆ.

ಮುಂಬರುವ ದಿನಗಳಲ್ಲಿ ವಾಣಿಜ್ಯ, ವ್ಯವಹಾರಗಳ ದೃಷ್ಟಿಯಿಂದ ಕಠಿಣ ಪರಿಸ್ಥಿತಿ ಉಂಟಾಗುವ ಸಂಭವವಿದ್ದಲ್ಲಿ, ಸಾಕಷ್ಟು ದ್ರವ್ಯಾಸ್ಥಿಯನ್ನು ಹೊಂದಿರಬೇಕೆಂಬ ಆಶಯದಿಂದ, ಆಡಳಿತ ಮಂಡಲಿಯು 2022–23ನೇ ಸಾಲಿನಲ್ಲಿ ಎಲ್ಲಾ ಸದಸ್ಯರಿಗೂ ತಮ್ಮ ಷೇರು ಬಂಡವಾಳದ ಶೇ.10%ರಂತೆ ಲಾಭಾಂಶವನ್ನು ನೀಡಲು ಶಿಫಾರಸ್ಸು ಮಾಡಿರುತ್ತದೆ.

ಸಹಕಾರಿಯ ಠೇವಣಿ, ವಿಶೇಷ ಠೇವಣಿ ಯೋಜನೆಗಳ ಬಡ್ಡಿದರಗಳು, ಸಾಲದ ಬಡ್ಡಿದರಗಳು, ಸಹಕಾರ ಕ್ಷೇತ್ರದಲ್ಲಿರುವ ಇನ್ನಿತರ ಸಂಸ್ಥೆಗಳ ಬಡ್ಡಿದರಗಳಿಗೆ ಸ್ಪರ್ಧಾತ್ಮಕವಾಗಿವೆ. ಮುಂಬರುವ ಕಠಿಣ ದಿನಗಳಲ್ಲಿ, ಸದಸ್ಯರ ಆಶಯಗಳಿಗೆ ತಕ್ಕ ರೀತಿಯಲ್ಲಿ ಸ್ಪಂದಿಸಿ, ಸಹಕಾರಿಯನ್ನು ಉತ್ತಮವಾಗಿ ನಡೆಸಿ ಮುಂದುವರಿಸಲು, ನಿಮ್ಮೆಲ್ಲರ ಸಹಾಯ, ಸಹಕಾರವನ್ನು ಕೋರುತ್ತೇನೆ.

**ಹೂಡಿಕೆಗಳು:** ವರದಿ ಸಾಲಿನಲ್ಲಿ ಸಹಕಾರಿಯು ತನ್ನಲ್ಲಿ ಲಭ್ಯವಿದ್ದ ಹೆಚ್ಚುವರಿ ನಿಧಿಗಳನ್ನು ನಿರುಪಯುಕ್ತವಾಗಿ ಬಿಡದೆ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ಸೆಕ್ಷನ್ 18ರ ನಿಬಂಧನೆಗಳ ಅನ್ವಯಆಗಿಂದಾಗ್ಗೆ ನಿಶ್ಚಿತಠೇವಣಿಗಳಲ್ಲಿ ತೊಡಗಿಸಿದ ಪರಿಣಾಮ ವರ್ಷದ ಆರಂಭದಲ್ಲಿ ರೂ.3204.77 ಲಕ್ಷದಷ್ಟಿದ್ದ ಹೂಡಿಕೆಯ ಮೊತ್ತವು, ವರ್ಷಾಂತ್ಯಕ್ಕೆ ರೂ.3275.38 ಲಕ್ಷಗಳಾಗಿರುತ್ತದೆ. ಈ ಹೂಡಿಕೆ ಮೊತ್ತದಲ್ಲಿ ರೂ.687.33 ಲಕ್ಷವು, ಸಹಕಾರಿಯ ಮೀಸಲು ನಿಧಿಯ ಹೂಡಿಕೆಯಾಗಿರುತ್ತದೆ. ಸಹಕಾರಿಯು ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತದೊಂದಿಗೆ ನಿಷ್ಕ್ರಿಯ ನಿಶ್ಚಿತ ಠೇವಣಿಗಳನ್ನು ಮತ್ತು ಉಳಿತಾಯ ಖಾತೆಯನ್ನು ಹೊಂದಿದ್ದು, ಇವುಗಳಿಂದ ಕಾಲಕಾಲಕ್ಕೆ ಬರುವ ಬಡ್ಡಿ ಆದಾಯವನ್ನು ಗುರುತಿಸಿ ಲೆಕ್ಕ ಪತ್ರಗಳಲ್ಲಿ ದಾಖಲಿಸಲಾಗುತ್ತಿದೆ. ಹಿಂದಿನ ಸಾಲಿನಂತೆ ಪ್ರಸ್ತುತ ಅಂದರೆ 2022–23ನೇ ಸಾಲಿನಲ್ಲಿ ಅದನ್ನು ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಸೂಕ್ತವಾಗಿ ಪ್ರತಿಬಿಂಬಿಸಲಾಗಿದೆ. ಈ ನಿಷ್ಕ್ರಿಯ ಹೂಡಿಕೆಗಳ ಸಂಬಂಧ ಇದುವರೆವಿಗೂ ಒಟ್ಟು ರೂ.53,00,000/–ಗಳನ್ನು ಸಹಕಾರಿಯ ಆರ್ಥಿಕ ತಃಖ್ತೆಗಳಲ್ಲಿ ಅವಕಾಶ/ಪ್ರವದಾನ ಕಲ್ಪಿಸಲಾಗಿದೆ.

**ನಿವ್ವಳ ಲಾಭ:** ನಮ್ಮ ಸಹಕಾರಿಯು ವರದಿ ಸಾಲಿನಲ್ಲಿ ಅಂದರೆ 2022–23ರಲ್ಲಿ ರೂ.164.38 ಲಕ್ಷಗಳಷ್ಟು ನಿವ್ವಳ ಲಾಭವನ್ನು ಗಳಿಸಿರುತ್ತದೆ. ವರದಿ ಸಾಲಿನಲ್ಲಿ ಸದಸ್ಯರಿಂದ ಸಾಲಗಳ ಬೇಡಿಕೆ ಕಡಿಮೆ ಇದುದರಿಂದ ಸಹಕಾರಿಯು ತನ್ನಲ್ಲಿ ಲಭ್ಯವಿದ್ದ ಹೆಚ್ಚುವರಿ ನಿಧಿಗಳನ್ನು ನಿರುಪಯುಕ್ತವಾಗಿ ಬಿಡದೆ, ಬೆಂಗಳೂರು ನಗರದ ಬನಶಂಕರಿ 6ನೇ ಹಂತದಲ್ಲಿ ಒಟ್ಟು ರೂ.633.63 ಲಕ್ಷಗಳ ಮೌಲ್ಯದ 2 ನಿವೇಶನಗಳನ್ನು ಖರೀದಿಸಲಾಗಿದೆ. ಆದುದರಿಂದ 2021–22ನೇ ಸಾಲಿನಲ್ಲಿ ಗಳಿಸಿದ ರೂ.181.07 ಲಕ್ಷಗಳ ನಿವ್ವಳ ಲಾಭಕ್ಕೆ ರೂ.16.69ಗಳಷ್ಟು ಕಡಿಮೆಯಾಗಿದೆ.

**ಆದಾಯದ ಮೇಲೆ ತೆರಿಗೆ:** ಆದಾಯ ತೆರಿಗೆ ಇಲಾಖೆಯವರು, IT sec.226(3)ರಅನ್ವಯ, ಸಹಕಾರಿಯ AY2013–14 ಮತ್ತು 2014–15ನೇ ವರ್ಷಗಳ ಒಟ್ಟು ಆದಾಯದ ಮೇಲೆ, ಆದಾಯ ತೆರಿಗೆ ರೂ.1,10,07,869/–ನ್ನು ವಸೂಲು ಮಾಡಿರುವುದನ್ನು ಸಹಕಾರಿಗೆ ವಾಪಸ್ಸು ಪಡೆಯಲು ಕ್ರಮವನ್ನು ತೆಗೆದುಕೊಳ್ಳಲಾಗಿರುತ್ತದೆ ಮತ್ತು ಸನ್ 2010–11ನೇ ಸಾಲಿನ ಅಂದರೆ AY2011–12ನೇ ಸಾಲಿನ ಆದಾಯ ತೆರಿಗೆ ರೂ.3,48,324/– ಮತ್ತು ಬಡ್ಡಿ ರೂ.3,27,402/– ಒಟ್ಟು ರೂ.6,75,726/– ಗಳೆಂದು ಅಸೆಸ್‌ಮೆಂಟ್ ಮಾಡಿದ್ದು, ಇದನ್ನು ಪ್ರಶ್ನಿಸಿ ಸಹಕಾರಿಯು ಸಂಬಂಧಪಟ್ಟ ಅಪೀಲು ಪ್ರಾಧಿಕಾರಗಳ ಎದುರು ಅಪೀಲು ಮಂಡಿಸಲಾಗಿದೆ. ಇದೇ ರೀತಿ ಸಹಕಾರಿಯ ಆರ್ಥಿಕ ವರ್ಷ ಸನ್ 2016–17, ಸನ್ 2017–18 ಮತ್ತು ಸನ್ 2019–20 ಹಾಗೂ ಇನ್ನಿತರೆ ವರ್ಷಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ನಿಗದಿಸಿದ್ದು, ಸದರಿ ನಿರ್ಣಯಗಳನ್ನು ಪ್ರಶ್ನಿಸಿ ಸಹಕಾರಿಯು ಸಂಬಂಧಪಟ್ಟ ಅಪೀಲು ಪ್ರಾಧಿಕಾರಗಳ ಮುಂದೆ ಅಪೀಲುಗಳನ್ನು ಮಂಡಿಸಲಾಗಿದೆ. ಸದರಿ ಪ್ರಕರಣಗಳು ವಿಚಾರಣೆಯಲ್ಲಿರುತ್ತವೆ.

**ಲೆಕ್ಕ ಪರಿಶೋಧನೆ:** ಸಹಕಾರಿಯ 2023–24ನೇ ಸಾಲಿನ ಲೆಕ್ಕ ಪತ್ರಗಳ ಪರಿಶೋಧನೆಯನ್ನು ನಡೆಸಲು ಲೆಕ್ಕ ಪರಿಶೋಧನಾ ಸಂಸ್ಥೆಗಳು ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದು ಸದರಿ ವಿವರಗಳನ್ನು ವಿಷಯ ಸಂಖ್ಯೆ ನಂ.9ರಲ್ಲಿ ಮಂಡಿಸಲಾಗಿದೆ. ಮಾನ್ಯ ಸದಸ್ಯರು, ಈ ವಿವರಗಳನ್ನು ಪರಿಶೀಲಿಸಿ ಉಪವಿಧಿ 22(2)(ಆ) ಅನುಸಾರ ಲೆಕ್ಕ ಪರಿಶೋಧಕರನ್ನು ನೇಮಿಸಬಹುದಾಗಿದೆ.

**ಸಹಕಾರಿ ವತಿಯಿಂದ ಅರ್ಹ ಸದಸ್ಯರಿಗೆ ಅಪಘಾತ ವಿಮಾ ಸೌಲಭ್ಯ:** ಕಳೆದ ಸಾಲಿನಂತೆ ಈ ವರ್ಷವೂ ಸಹಾ, 70 ವರ್ಷ ವಯಸ್ಸಿನೊಳಗಿನ ಪ್ರತಿಯೊಬ್ಬ ಸದಸ್ಯನಿಗೂ, ಉಚಿತವಾಗಿ, ಸಹಕಾರಿಯೇ ಅಪಘಾತ ವಿಮೆ ಕಂತು ಪಾವತಿಸಿ, ದಿ. 12.02.2023ರಿಂದ ಮುಂದಿನ 1 ವರ್ಷಕ್ಕೆ ಜಾರಿಗೆ ಬರುವಂತೆ, ರೂ. ನಾಲ್ಕು ಲಕ್ಷಗಳ ಅಪಘಾತ ವಿಮಾ ಯೋಜನೆಯನ್ನು ಮುಂದುವರಿಸಿದೆ ಸಹಕಾರಿಯ ಸದಸ್ಯರಿಗೆ ಕ್ಯಾನ್ಸರ್ ಖಾಯಿಲೆಯ ಚಿಕಿತ್ಸೆಗಾಗಿ, ಸಹಕಾರಿಯ ಸಾಮಾನ್ಯ ಕ್ಷೇಮ ನಿಧಿಯಿಂದ, ಸದಸ್ಯರೋರ್ವರಿಗೆ, ಗರಿಷ್ಠ ರೂ.25,000/–ದ ನೆರವನ್ನು ನೀಡಲು ನಿರ್ಧರಿಸಲಾಗಿದೆ. ಸದರಿ ನೆರವಿನ ಅಗತ್ಯವಿರುವ ಸದಸ್ಯರು, ಸದರಿ ಸೌಲಭ್ಯವನ್ನು ಪಡೆಯಬಹುದೆಂದು ವಿನಂತಿಸುತ್ತೇನೆ.

**ಆಡಳಿತ ಮಂಡಲಿ:** ಆಡಳಿತ ಮಂಡಲಿಯು ವರದಿ ಸಾಲಿನಲ್ಲಿ ಒಟ್ಟು 22 ಸಭೆಗಳನ್ನು ನಡೆಸಿರುತ್ತದೆ. ಪ್ರತಿಯೊಂದು ಸಭೆಯಲ್ಲಿ ಸದಸ್ಯರು ಕ್ರಿಯಾತ್ಮಕವಾಗಿ ಪಾಲ್ಗೊಂಡು, ಸಹಕಾರಿಯ ಪ್ರತಿಯೊಂದು ಕಾರ್ಯ ಚಟುವಟಿಕೆಗಳನ್ನು ಕುರಿತು ಚರ್ಚಿಸಿ, ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುವುದರ ಮೂಲಕ ಸಹಕಾರಿಯ ಉತ್ತಮ ಬೆಳವಣಿಗೆಗೆ ಕಾರಣೀಭೂತರಾಗಿರುತ್ತಾರೆ.

**ಸಾಲ ಮಂಜೂರಾತಿ ಸಮಿತಿ:** ಸಾಲ ಮಂಜೂರಾತಿ ಸಮಿತಿಯು ಸಹ ಪ್ರಸಕ್ತ ಸಾಲಿನಲ್ಲಿ ಒಟ್ಟು 17 ಸಭೆಗಳನ್ನು ನಡೆಸಿರುತ್ತದೆ. ಈ ಸಮಿತಿಯು ಸಾಲಕ್ಕಾಗಿ ಸ್ವೀಕರಿಸಿದ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತನ್ನ ವರದಿಗಳನ್ನು ಕ್ಲುಪ್ತ ಸಮಯದಲ್ಲಿ ನೀಡಿ ಸದಸ್ಯರಿಗೆ ಸಾಲ ಮಂಜೂರಾತಿಯನ್ನು ನೀಡುವಲ್ಲಿ ಉತ್ತಮ ಸಹಕಾರವನ್ನು ನೀಡಿರುತ್ತದೆ.

**ಹೂಡಿಕೆ ಉಪ ಸಮಿತಿ:** ಹೂಡಿಕೆ ಉಪಸಮಿತಿಯು ಸಹ ಪ್ರಸಕ್ತ ಸಾಲಿನಲ್ಲಿ ಒಟ್ಟು 24 ಸಭೆಗಳನ್ನು ನಡೆಸಿರುತ್ತದೆ. ಸಹಕಾರಿಯಲ್ಲಿ ಹೆಚ್ಚಾಗಿರುವಂಥ ಹಣವನ್ನು ಸೂಕ್ತ ರೀತಿಯಲ್ಲಿ ನಿಯಮಾನುಸಾರ, ಹೂಡಿಕೆಯ ಭದ್ರತೆ ಮತ್ತು ಬಡ್ಡಿಯನ್ನು ಪರಿಗಣಿಸಿ, ಸಾರ್ವಜನಿಕ ಮತ್ತು ಸಹಕಾರಿ ವಲಯದ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲು ತೀರ್ಮಾನಿಸಿರುತ್ತದೆ.

**ಸಹಕಾರಿಯು ಒದಗಿಸುತ್ತಿರುವ ವಿಶೇಷ ಸೇವೆ/ಸೌಲಭ್ಯಗಳು:**

1. ಸಂಪೂರ್ಣ ಗಣಕೀಕೃತ ಸೌಲಭ್ಯವಿರುವ ಸಹಕಾರಿ;
2. ಠೇವಣಿಗಳ ಮೇಲೆ ವಿಶೇಷ ಬಡ್ಡಿದರ ಸೌಲಭ್ಯ;
3. ಹಲವಾರು ರಾಷ್ಟ್ರೀಕೃತ, ಷೆಡ್ಯೂಲ್ಡ್, ಸಹಕಾರಿ ಬ್ಯಾಂಕುಗಳು ಸಾಲಗಳ ಮೇಲೆ ವಿಧಿಸುತ್ತಿರುವ ಬಡ್ಡಿಯ ದರಗಳಿಗೆ ಅತ್ಯಂತ ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ, ನಮ್ಮ ಸಹಕಾರಿಯಿಂದ ತ್ವರಿತವಾಗಿ, ಸುಲಲಿತವಾಗಿ, ಸುಲಭ ಕಂತುಗಳಲ್ಲಿ ಮರುಪಾವತಿ ಮಾಡುವ ರೀತಿಯಲ್ಲಿ, ವಿವಿಧ ಉದ್ದೇಶಗಳಿಗೆ, ವಿವಿಧ ಬಗೆಯ ಸಾಲಗಳ ಸೌಲಭ್ಯ.
4. ಭದ್ರತಾ ಕಪಾಟುಗಳ ಸೌಲಭ್ಯ;
5. ಚಿಟ್ ಫಂಡ್ ವ್ಯವಹಾರ;
6. ಇ–ಸ್ಟಾಂಪಿಂಗ್ (ಛಾಪ ಕಾಗದ) ಸೌಲಭ್ಯ;
7. BBMP ಟ್ಯಾಕ್ಸ್, ಟೆಲಿಫೋನ್ ಬಿಲ್ಸ್, ಮೊಬೈಲ್ ಬಿಲ್ಸ್, ವಿಮಾ ಕಂತು ಪಾವತಿಸುವ ಸೌಲಭ್ಯ;
8. Western Union Money Transfer, Ria Money Transfer ಮೂಲಕ ವಿದೇಶಗಳಿಂದ ಹಣ ವರ್ಗಾವಣೆ.
9. ಎಸ್ ಎಮ್ ಎಸ್ (SMS) ಅಲರ್ಟ್ಸ್ ಸೇವೆ.
10. ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ.

**2023–24ನೇ ಸಾಲಿಗೆ ಕ್ರಿಯಾ ಯೋಜನೆ:** ಸಹಕಾರಿಯು 2023–24ನೇ ಸಾಲಿಗೆ ಈ ಕೆಳಗಿನಂತೆ ಯೋಜನೆ ಹಮ್ಮಿಕೊಂಡಿದ್ದು, ಇದನ್ನು ಕಾರ್ಯರೂಪಕ್ಕೆ ತರಲು ಎಲ್ಲ ಸದಸ್ಯರು ತಮ್ಮ ಸಹಕಾರ ನೀಡಬೇಕಾಗಿ ಈ ಮೂಲಕ ಕೋರಲಾಗಿದೆ.

| | | | | | |
|---|---|---|---|---|---|
| 1. | ಸದಸ್ಯರ ಸಂಖ್ಯೆ | 3000 | 4. | ಹೂಡಿಕೆಗಳು | ರೂ.26 ಕೋಟಿಗಳು |
| 2. | ಷೇರು ಬಂಡವಾಳ | ರೂ.7.5 ಕೋಟಿಗಳು | 5. | ಸಾಲ ಮತ್ತು ಮುಂಗಡಗಳು | ರೂ.60 ಕೋಟಿಗಳು |
| 3. | ಠೇವಣಿ ಸಂಗ್ರಹಣೆ | ರೂ.65 ಕೋಟಿಗಳು | 6. | ದುಡಿಯುವ ಬಂಡವಾಳ | ರೂ.86 ಕೋಟಿಗಳು |

**ಕೃತಜ್ಞತೆಗಳು:** 2023–24ನೇ ಸಾಲಿನ ಅಂತ್ಯಕ್ಕೆ, ಪ್ರಸ್ತುತ ಆಡಳಿತ ಮಂಡಳಿಯ ಸೇವಾವಧಿಯು ಮುಕ್ತಾಯಗೊಳ್ಳಲಿರುವುದು. ಕಳೆದ 4 ವರ್ಷಗಳಲ್ಲಿ ಸದಸ್ಯರೆಲ್ಲರೂ ಪ್ರಸ್ತುತ ಆಡಳಿತ ಮಂಡಳಿಯ ಮೇಲಿಟ್ಟಿರುವ ವಿಶ್ವಾಸ, ನಂಬಿಕೆ, ಭರವಸೆಗೆ ಅನುಗುಣವಾಗಿ, ಸಹಕಾರಿಯ ಎಲ್ಲಾ ನಿರ್ದೇಶಕರು, ಸಹಕಾರಿಯ ಕಾರ್ಯ, ಕಲಾಪಗಳಲ್ಲಿ ಸಾಕಷ್ಟು ಪ್ರಗತಿಯನ್ನು ತರಲು ಶ್ರಮವನ್ನು ವಹಿಸಿದ್ದಾರೆ. ಆಡಳಿತ ಮಂಡಳಿಯು ಸಹಕಾರಿಯ ಎಲ್ಲಾ ಸದಸ್ಯರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ನಮ್ಮ ಸಹಕಾರಿಯ ಗಣನೀಯ ಅಭಿವೃದ್ಧಿಗೆ ಸೂಕ್ತ ಹಾಗೂ ಸತತ ಮಾರ್ಗದರ್ಶನ ಮತ್ತು ಸಹಕಾರಗಳನ್ನು ನೀಡುತ್ತಿರುವ ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಮತ್ತು ಅಧಿಕಾರಿಗಳಿಗೆ, ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಇಲಾಖೆಯ ಅಧಿಕಾರಿಗಳಿಗೆ, ಹಾಗೂ ನಮ್ಮ ಸಹಕಾರಿಗೆ ಸೇವೆ ಸಲ್ಲಿಸುತ್ತಿರುವ ಹಲವು ಬ್ಯಾಂಕುಗಳ ಸಿಬ್ಬಂದಿ ವರ್ಗದವರಿಗೆ, ಸಹಕಾರಿಯ ದೈನಂದಿನ ಕೆಲಸಗಳಿಗೆ ಅನುಕೂಲವಾದ ತತ್ರಾಂಶವನ್ನು ಒದಗಿಸುತ್ತಿರುವ M/s.Processware Systems Pvt Ltd. ಮತ್ತು ಇನ್ನಿತರ ಸಂಸ್ಥೆಗಳ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರೆಲ್ಲರಿಗೂ ಆಡಳಿತ ಮಂಡಲಿಯ ಕೃತಜ್ಞತೆಗಳು. ಸಹಕಾರಿಯ ಕಾನೂನು ಸಲಹೆಗಾರರು, ಚರಾಸ್ತಿ, ಚಿನ್ನಾಭರಣ ಮತ್ತು ವಾಹನ ಮೌಲ್ಯಮಾಪಕರು, ಸಹಕಾರಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಿರುವ ಶ್ರೀ.ಸೋಮೇಶ್ ಎನ್ ಎನ್, ಚಾರ್ಟರ್ಡ್ ಅಕೌಂಟೆಂಟ್‌ರವರಿಗೆ ಹಾಗೂ ಸಹಕಾರಿಯ ಸರ್ವಾಂಗೀಣ ಬೆಳವಣಿಗೆಗೆ, ನಿರಂತರ ಸಲಹೆ, ಸೂಚನೆ ಮತ್ತು ಮಾರ್ಗದರ್ಶನ ನೀಡುತ್ತಿರುವ ಶ್ರೀ. ಬಿ.ವಿ. ಮಲ್ಲಾರೆಡ್ಡಿ ಮತ್ತು ಶ್ರೀ. ಗೋಪಿನಾಥ್.ಡಿ.ಆರ್‌ರವರಿಗೂ ಆಡಳಿತ ಮಂಡಲಿಯ ಪರವಾಗಿ ಧನ್ಯವಾದಗಳು. ಈ ಸಾಲಿನ ಸಹಕಾರಿಯ ಸಾಧನೆಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಾರಣರಾದ ಸರ್ವರಿಗೂ ಆಡಳಿತ ಮಂಡಲಿಯ ಪರವಾಗಿ ನನ್ನ ವೈಯಕ್ತಿಕ ಧನ್ಯವಾದಗಳು. ಮುಖ್ಯವಾಗಿ ಕೆಲಸದ ಒತ್ತಡಗಳನ್ನು ಸಹಿಸಿಕೊಂಡು ವ್ಯವಹಾರದ ವೇಳೆಯ ಇತಿಮಿತಿಯನ್ನು ಪರಿಗಣಿಸದೆ, ಸದಸ್ಯರಿಗೆ ಉತ್ತಮವಾದ ಸೇವೆ ನೀಡುತ್ತಾ ಬಂದಿರುವ ನಮ್ಮ ಸಿಬ್ಬಂದಿ ವರ್ಗದವರಿಗೆಲ್ಲರಿಗೂ ನನ್ನ ಅಭಿನಂದನೆಗಳ ಜೊತೆಗೆ ಧನ್ಯವಾದಗಳನ್ನು ತಿಳಿಸಲಿಚ್ಛಿಸುತ್ತೇನೆ.

ಆಡಳಿತ ಮಂಡಲಿಯ ಮೇಲೆ ತಾವೆಲ್ಲರೂ ಇಟ್ಟಿರುವ ನಂಬಿಕೆ ಮತ್ತು ಭರವಸೆಗೆ ಅನುಗುಣವಾಗಿ, ಸಹಕಾರಿಯ ಎಲ್ಲಾ ನಿರ್ದೇಶಕರು ಇನ್ನು ಮುಂದೆಯೂ ಸಹ ಸಹಕಾರಿಯ ಕಾರ್ಯ, ಕಲಾಪಗಳಲ್ಲಿ ಉತ್ಸಾಹದಿಂದ ಭಾಗವಹಿಸಿ, ಪಾರದರ್ಶಕತೆಯ ಜೊತೆಗೆ, ಉತ್ತಮ ಪ್ರಗತಿಯನ್ನು ತರಲು ಶ್ರಮಿಸುತ್ತಾರೆ ಎಂದು ಸದಸ್ಯರೆಲ್ಲರಿಗೂ ಭರವಸೆ ನೀಡಲು ಇಚ್ಛಿಸುತ್ತೇನೆ.

ಕೊನೆಯದಾಗಿ ಎಲ್ಲರ ಊಹೆಗೂ ಮೀರಿ ಬೆಳೆಯುತ್ತಿರುವ ನಮ್ಮೆಲ್ಲರ ಈ ಸಂಸ್ಥೆಗೆ ಹಾರ್ದಿಕ ಯಶಸ್ಸು ಬಯಸುತ್ತಾ, ನಮ್ಮ ಈ "ಸ್ವಾಭಿಮಾನಿ ಸೌಹಾರ್ದ ಸಹಕಾರಿ"ಯ ಜೊತೆಗೆ ತಮ್ಮೆಲ್ಲರ ಸಹಾಯ, ಸಹಕಾರ, ಸಂಬಂಧಗಳು ಇನ್ನು ಮುಂದೆಯೂ ಸುಮಧುರವಾಗಿರಲಿ ಹಾಗೂ ಸಹಕಾರಿಯನ್ನು ಪ್ರಗತಿ ಪಥದಲ್ಲಿ ನಡೆಸಲು ತಮ್ಮೆಲ್ಲರ ಸಹಕಾರ, ಸೌಹಾರ್ದತೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಪೇಕ್ಷಿಸುತ್ತಾ ತಮ್ಮೆಲ್ಲರಿಗೂ ಸಹಕಾರಿವತಿಯಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಆಡಳಿತ ಮಂಡಳಿಯ ಪರವಾಗಿ

**ಶ್ರೀ. ಸದಾನಂದ ರೆಡ್ಡಿ.ಬಿ.ವಿ.**

ಅಧ್ಯಕ್ಷರು

* * *

# 7. ಲೆಕ್ಕಪರಿಶೋಧನಾ ವರದಿ

ಸೋಮೇಶ್ ಎನ್ ಎನ್, ಸನ್ನದು ಲೆಕ್ಕಪರಿಶೋಧಕ ಆದ ನಾನು ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ನಂ.125, ಡಯಾಗನಲ್ ರಸ್ತೆ, ವಿ.ವಿ. ಪುರಂ, ಬೆಂಗಳೂರು–560 004, ಇದರ ಸಾಲಾಂತ್ಯ 31.03.2023ರಂತೆ ಆಸ್ತಿ ಜವಾಬ್ದಾರಿ ತಃಖ್ತೆ ಹಾಗೂ ಇದರೊಂದಿಗೆ ಲಗತ್ತಿಸಿರುವ ಇವರ ಸನ್ 2022–23 ಸಹಕಾರಿ ಸಾಲಿನ ಜಮಾ ಖರ್ಚು ತಃಖ್ತೆ, ಲಾಭ–ನಷ್ಟ ತಃಖ್ತೆ ಇವುಗಳ ಲೆಕ್ಕ ಪರಿಶೋಧನೆ ನೆಡೆಸಿರುತ್ತೇನೆ. ಈ ಆರ್ಥಿಕ ತಃಖ್ತೆಗಳು ಸಹಕಾರಿಯ ಕಾರ್ಯಕಾರಿ ಮಂಡಳಿಯು ತನ್ನ ಜವಾಬ್ದಾರೀರೀತ್ಯ ವ್ಯವಸ್ಥಿತವಾಗಿ ನಿರ್ವಹಿಸಿದ ಲೆಕ್ಕ ಪತ್ರಗಳ ಆಧಾರದ ಮೇಲೆ ತಯಾರು ಪಡಿಸಲಾಗಿದ್ದು ಹಾಗೂ ಈ ರೀತಿ ಸಿದ್ದಪಡಿಸಿದ ಹಣಕಾಸು ವ್ಯವಹಾರದ ಲೆಕ್ಕ ಪತ್ರಗಳ ಮೇಲೆ ಪರಿಶೋಧನೆ ನೆಡೆಸಿ, ಆ ಪ್ರಕಾರ ನನ್ನ ಅಭಿಪ್ರಾಯವನ್ನು ನೀಡುವುದು ನನ್ನ ಹೊಣೆಗಾರಿಕೆಯಾಗಿರುತ್ತದೆ. ನಾನು ನನ್ನ ಲೆಕ್ಕ ಪರಿಶೋಧನೆಯನ್ನು ಭಾರತದಲ್ಲಿ ಸಾಮಾನ್ಯವಾಗಿ ಸಮ್ಮತವುಳ್ಳದ್ದಾಗಿ ಪ್ರಚಲಿತದಲ್ಲಿರುವ ಲೆಕ್ಕ ಪರಿಶೋಧನೆ ಮಾನದಂಡಗಳ ಪ್ರಕಾರ ನಿರ್ವಹಿಸಿರುತ್ತೇನೆ. ಲೆಕ್ಕಪರಿಶೋಧನೆಯ ಈ ಮಾನದಂಡಗಳು ನನ್ನಿಂದ ಈ ಮೇಲೆ ಹೇಳಿರುವ ಲೆಕ್ಕ ಪತ್ರಗಳು ಯಾವುದೇ ಗುರುತರವಾದ ತಪ್ಪು ಮಾಹಿತಿಗಳನ್ನು ನೀಡುತ್ತಿಲ್ಲ ಎಂಬುದರ ಬಗ್ಗೆ ತಕ್ಕ ಭರವಸೆಯನ್ನು ನೀಡಲು ಕಾರ್ಯಯೋಜನೆಯನ್ನು ರೂಪಿಸಿ ಅದರಂತೆ ಪರಿಶೋಧನೆ ನಡೆಸಲು ಅಪೇಕ್ಷಿಸುತ್ತವೆ. ಈ ರೀತಿ ಮಾಡಿದ ಲೆಕ್ಕ ಪರಿಶೋಧನೆಯು ಈ ಮೇಲೆ ಹೇಳಿದ ಲೆಕ್ಕ ಪತ್ರಗಳಲ್ಲಿರುವ ಮೊಬಲಗುಗಳ ಹಾಗೂ ಅನಾವರಣಗೊಳಿಸಿರುವ ಮಾಹಿತಿಗಳ ಸಾಕ್ಷ್ಯಾಧಾರಗಳನ್ನು ತಪಾಸಣೆ ಮಾಡಿ ಪರಿಶೀಲಿಸುವುದಾಗಿರುತ್ತದೆ. ಕಾರ್ಯಕಾರಿ ಮಂಡಳಿಯಿಂದ ಈ ಸಂಬಂಧ ಲೆಕ್ಕ ಪುಸ್ತಕಗಳ ನಿರ್ವಹಣಾ ತತ್ವಗಳ ಉಪಯೋಗ ಹಾಗೂ ಅವರು ಮಾಡಿರುವ ಕೆಲ ಮಹತ್ವಪೂರ್ಣವಾದ ಅಂದಾಜುಗಳ ಒಪ್ಪು ತಪ್ಪುಗಳನ್ನು ಅಳೆಯುವುದು ಸಹ ಲೆಕ್ಕ ಪರಿಶೋಧನೆಯ ಗುರಿಯಾಗಿರುತ್ತದೆ. ಈ ಲೆಕ್ಕ ಪರಿಶೋಧನೆಯು ನನ್ನ ಈ ಕೆಳಗಿನ ಅಭಿಪ್ರಾಯಕ್ಕೆ ತಕ್ಕ ತಳಹದಿಯನ್ನು ಒದಗಿಸುತ್ತದೆಎಂದು ನಂಬಿರುತ್ತೇನೆ.

ಮತ್ತು ನಾನು ಮುಂದುವರೆದು ಹೀಗೆಂದು ವರದಿ ನೀಡುತ್ತೇನೆ:

1. ನಾನು ನನ್ನ ಅತ್ಯುತ್ತಮ ತಿಳುವಳಿಕೆ ಹಾಗೂ ನಂಬಿಕೆಗಳ ಪ್ರಕಾರ ಸಹಕಾರಿಯ ವ್ಯವಹಾರಗಳ ಕುರಿತು ಲೆಕ್ಕ ಪರಿಶೋಧನೆಯನ್ನು ನಡೆಸಲು ಬೇಕಾದ ಮಾಹಿತಿ ಹಾಗೂ ವಿವರಣೆಗಳನ್ನು ಸಂಬಂಧ ಪಟ್ಟವರಿಂದ ಪಡೆದಿರುತ್ತೇನೆ.
2. ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ಹಾಗೂ ಸಹಕಾರಿಯ ಉಪವಿಧಿಗಳ ಪ್ರಕಾರ ತನ್ನ ವಹಿವಾಟುಗಳಿಗೆ ಸಂಬಂಧಪಟ್ಟ ಲೆಕ್ಕ ಪತ್ರಗಳನ್ನು ತನ್ನ ನೊಂದಾಯಿತ ಹಾಗೂ ಶಾಖಾ ಕಛೇರಿಗಳಲ್ಲಿ ಕ್ರಮಬದ್ಧವಾಗಿ ನಿರ್ವಹಣೆ ಮಾಡಿರುತ್ತದೆ. ಹಾಗೂ ನನ್ನ ಲೆಕ್ಕ ಪರಿಶೋಧನೆಯ ಸಲುವಾಗಿ ಸಹಕಾರಿಯ ವ್ಯವಸ್ಥಾಪಕ ಮಂಡಳಿಯು ಸೂಕ್ತ ಮಾಹಿತಿ ಹಾಗೂ ವಿವರಣೆಗಳನ್ನು ನೀಡಿರುತ್ತದೆ.
3. ಸಹಕಾರಿಯ ಸನ್ 2022–23ನೇ ಸಾಲಿನ ಜಮಾ ಖರ್ಚು ತಃಖ್ತೆ, ಲಾಭ–ನಷ್ಟ ತಃಖ್ತೆ ಮತ್ತು ದಿನಾಂಕ 31.03.2023ರಂತೆ ಆಸ್ತಿ ಜವಾಬ್ದಾರಿ ತಃಖ್ತೆಗಳು ಸಹಕಾರಿಯು ತನ್ನ ನೊಂದಾಯಿತ ಕಛೇರಿ ಹಾಗೂ ಶಾಖಾ ಕಛೇರಿಗಳಲ್ಲಿ ನಿರ್ವಹಣೆ ಮಾಡಿರುವ ಲೆಕ್ಕ ಪುಸ್ತಕಗಳು ಹಾಗೂ ಸಹಕಾರಿಯು ಸಂಬಂಧ ಪಟ್ಟ ಕಾನೂನುಗಳ ಪ್ರಕಾರ ಕಾಲ ಕಾಲಕ್ಕೆ ಸಲ್ಲಿಸಿರುವ ವಿವರಣೆಗಳ ಪ್ರಕಾರವೇ ಇರುತ್ತವೆ.
4. ನನ್ನ ಅಭಿಪ್ರಾಯದ ಪ್ರಕಾರ ಈ ವರದಿಯಲ್ಲಿ ಉಲ್ಲೇಖಿತವಾದ ಜಮಾ ಖರ್ಚು ತಃಖ್ತೆ, ಲಾಭ ನಷ್ಟ ತಃಖ್ತೆ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 33 ಉ.ಕಲಂ(1)ರಲ್ಲಿ ಉಲ್ಲೇಖಿತವಾದ ICAI ಸಂಸ್ಥೆಯು ನೀಡಿರುವ ಲೆಕ್ಕ ಪತ್ರ ನಿರ್ವಹಣಾ ಮಾನದಂಡಗಳನ್ನು ಅನುಸರಿಸಿವೆ.
5. ನನ್ನ ಅಭಿಪ್ರಾಯದಲ್ಲಿ ಮತ್ತು ನನಗೆ ನೀಡಲ್ಪಟ್ಟ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ ಮೇಲೆ ಹೇಳಿದ ಲೆಕ್ಕ ಪತ್ರಗಳು ಹಾಗೂ ಅವುಗಳ ಮೇಲಿನ ಟಿಪ್ಪಣಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅಡಿಯಲ್ಲಿ ಅಪೇಕ್ಷಿತ ಮಾಹಿತಿಗಳನ್ನು ಅಪೇಕ್ಷಿತ ರೀತಿಯಲ್ಲಿ ಹಾಗೂ ಭಾರತದಲ್ಲಿ ಸಾಮಾನ್ಯವಾಗಿ

ಸಮ್ಮತವುಳ್ಳದ್ದಾಗಿ ಪ್ರಚಲಿತದಲ್ಲಿರುವ ಲೆಕ್ಕಪತ್ರ ನಿರ್ವಹಣಾ ಮಾನದಂಡಗಳ ಅನುಸಾರವಾಗಿ ಈ ಕೆಳಗಿನವುಗಳ ನೈಜ ಹಾಗೂ ನ್ಯಾಯೋಚಿತ ಚಿತ್ರಣವನ್ನು ನೀಡುತ್ತಿವೆ :–

ಅ) ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ದಿನಾಂಕ 31.03.2023ನೇ ಸಾಲಾಂತ್ಯದಲ್ಲಿನ ಸಹಕಾರಿಯ ಆರ್ಥಿಕ ಸ್ಥಿತಿಗತಿಗಳ ಬಗ್ಗೆ; ಮತ್ತು

ಆ) ಸನ್ 2022–23ನೇ ಸಾಲಿನ ಜಮಾ–ಖರ್ಚು ತಃಖ್ತೆಯ ಜಮಾ ಹಾಗೂ ಖರ್ಚಿನ ಮೊಬಲಗುಗಳ ನೈಜತೆ ಮತ್ತು ನಿಖರತೆಯ ಬಗ್ಗೆ;

ಇ) ಸನ್ 2022–23ನೇ ಸಾಲಿನ ಲಾಭ–ನಷ್ಟ ತಃಖ್ತೆಯ ಲಾಭದ ನಿಖರತೆಯ ಬಗ್ಗೆ.

6. ಹೀಗೆ ಮುಂದುವರೆಯುತ್ತ ನಾನು ನನ್ನ ಲೆಕ್ಕ ಪರಿಶೋಧನೆ ವೇಳೆಯಲ್ಲಿ ನಡೆಸಿದ ಪರೀಕ್ಷಾರ್ಥ ತಪಾಸಣೆಗಳ ಆಧಾರದ ಮೇಲೆ ಈ ರೀತಿ ವರದಿ ಸಲ್ಲಿಸುತ್ತೇನೆ :–

ಅ) ಸಹಕಾರಿಯು ತನ್ನ ಸಾಲಗಾರರಿಗೆ ನೀಡಿದ ಸಾಲಗಳ ಪೈಕಿ ಜಾಮೀನು ಸಾಲಗಳ ಹೊರತಾಗಿ ಉಳಿದೆಲ್ಲಾ ಸಾಲಗಳ ಸಂಬಂಧ ಉಚಿತ ಮೌಲ್ಯದ ಆಸ್ತಿಗಳ ಆಧಾರಗಳನ್ನು ಸಂಬಂಧಪಟ್ಟ ಸಾಲಗಾರರಿಂದ ನಿಯಮಾನುಸಾರ ತನ್ನ ಹೆಸರಿಗೆ ಪಡೆದಿರುತ್ತದೆ, ಹಾಗೂ ಈ ರೀತಿ ಸಾಲಗಳನ್ನು ನೀಡುವಾಗ ಸಾಲಗಾರರ ಮೇಲೆ ವಿಧಿಸಿರುವ ಷರತ್ತುಗಳು ಹಾಗೂ ಕಟ್ಟಳೆಗಳು ಮೇಲ್ನೋಟಕ್ಕೆ ಸಹಕಾರಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಧಕ್ಕೆ ತರುವಂತೆ ತೋರುವುದಿಲ್ಲ.

ಆ) ಲೆಕ್ಕಪತ್ರಗಳಲ್ಲಿ ನಮೂದಿಸಿರುವಂತೆ ಸಹಕಾರಿ ಸಾಲು ಸನ್ 2022–23ರಲ್ಲಿ ಸಹಕಾರಿಯು ನಡೆಸಿರುವ ವ್ಯಾಪಾರ ವಹಿವಾಟುಗಳು ಮೇಲ್ನೋಟಕ್ಕೆ ಸಹಕಾರಿಯ ಹಿತಾಸಕ್ತಿಗಳಿಗೆ ಧಕ್ಕೆ ತರುವಂತೆ ತೋರುವುದಿಲ್ಲ.

ಇ) ಸಹಕಾರಿಯು ಸನ್ 2022–23ಸಾಲಿನ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಯಾವುದೇ ವೈಯಕ್ತಿಕ ವೆಚ್ಚಗಳನ್ನು ಸಹಕಾರಿಯ ಖರ್ಚುಗಳೆಂದು ನಮೂದಿಸಿರುವುದಿಲ್ಲ.

ಈ) ಸಹಕಾರಿಯು ನಿರ್ವಹಣೆ ಮಾಡಿರುವ ದಾಖಲೆಗಳು ತೋರುವಂತೆ, ಅದು ತನ್ನ ಷೇರುಗಳನ್ನು ಸದಸ್ಯರಿಗೆ ನಗದು ಹಣಕ್ಕೆ ಪ್ರತಿಯಾಗಿಯೇ ವಿತರಿಸಿದ್ದು ಹಾಗೂ ಆ ನಗದು ಹಣವು ವಾಸ್ತವದಲ್ಲಿ ಸಹಕಾರಿಯ ಕೈ ಸೇರಿರುತ್ತದೆ. ಹಣದ ಹೊರತಾಗಿ ಬೇರೆಯಾವುದೇ ಪ್ರತಿಫಲಕ್ಕಾಗಿಯೂ ಷೇರುಗಳನ್ನು ಸಹಕಾರಿಯು ವಿತರಣೆ ಮಾಡಿರುವುದು ಕಂಡುಬಂದಿರುವುದಿಲ್ಲ.

ಉ) ಸನ್ 2022–23ನೇ ಸಹಕಾರಿ ಸಾಲಿನಲ್ಲಿ ಸಹಕಾರಿಯ ವೆಚ್ಚ ಖರ್ಚುಗಳನ್ನು ಅಥವಾ ಆದಾಯವನ್ನು ನಮೂದಿಸುವಲ್ಲಿ ಗುರುತರವಾದ ಲೋಪದೋಷಗಳು ಅಥವಾ ಅನಿಯಮಿತತೆಗಳು ಜರುಗಿರುವುದು ಕಂಡುಬಂದಿಲ್ಲ.

ಊ) ಸಹಕಾರಿಯ ಕಾರ್ಯಕಾರಿ ಮಂಡಳಿಯು ನೀಡಿದ ವಿವರಣೆಯ ಪ್ರಕಾರ ಪ್ರಸ್ತುತ ಕಾನೂನಿನ ಅಡಿಯಲ್ಲಿ ಸಹಕಾರಿಯು ತನ್ನ ವ್ಯವಹಾರಗಳನ್ನು RBIನ ಬ್ಯಾಂಕಿಂಗ್ ಲೈಸೆನ್ಸ್ ಪಡೆದು ನಡೆಸುವ ಅವಶ್ಯಕತೆಯಿರುವುದಿಲ್ಲವಾಗಿ RBIನ ನಿರ್ದೇಶನಗಳು ಅಥವಾ ಮಾರ್ಗದರ್ಶಿ ಸೂತ್ರಗಳು ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಸಾಮಾನ್ಯವಾಗಿ ಅನ್ವಯವಾಗುವುದಿಲ್ಲ.

ಋ) ಮತ್ತು, ನಾನು ನನಗೆ ಸಮಂಜಸವೆಂದು ತೋರಿದ ತಪಾಸಣೆಗಳ ಮೇರೆಗೆ ಹಾಗೂ ನನಗೆ ನೀಡಿದ ಮಾಹಿತಿ ಹಾಗೂ ವಿವರಣೆಗಳ ಆಧಾರದಿಂದ ಈ ಮುಂದಿನಂತೆ ವರದಿ ನೀಡುತ್ತೇನೆ ಅದೇನೆಂದರೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅಡಿಯಲ್ಲಿ ಇನ್ನಿತರ ಅಪೇಕ್ಷಿತ ವಿವರಗಳನ್ನು ಬೇರೊಂದು ಅನುಬಂಧದಲ್ಲಿ ಸವಿವರವಾಗಿ ನೀಡಲಾಗಿದೆ. ಹಾಗೂ ಆ ಅನುಬಂಧವು ಈ ಲೆಕ್ಕ ಪರಿಶೋಧನ ವರದಿಯ ಅವಿಭಾಜ್ಯ ಅಂಗವಾಗಿರುತ್ತದೆ.

ಸಹಿ/–

ದಿನಾಂಕ : 05.08.2023

ಸ್ಥಳ : ಬೆಂಗಳೂರು

**(ಎನ್‌ಎನ್ ಸೋಮೇಶ್)**
ಸನ್ನದು ಲೆಕ್ಕ ಪರಿಶೋಧಕ
UDIN: 23202618BGUXQH4386

## ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,ನ ಸಾಲಾಂತ್ಯ 31.03.2023ರ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಗೆ ಲಗತ್ತಿಸುವ ಲೆಕ್ಕಪತ್ರಗಳ ಮೇಲಿನ ಟಿಪ್ಪಣಿ

1. ಸಹಕಾರಿಯ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಹಾಗೂ ಲಾಭ- ನಷ್ಟ ತಃಖ್ತೆಯಲ್ಲಿ ಹಿಂದಿನ ಸಾಲಿಗೆ ಸಂಬಂಧಿಸಿದ ಸಂಖ್ಯೆಗಳನ್ನು ಹೋಲಿಕೆಯ ಸಲುವಾಗಿ ನೀಡಲಾಗಿದೆ.

2. ಸಹಕಾರಿಯ ಹಿಂದಿನ ಸಾಲಾಂತ್ಯದ ಶಿಲ್ಕುಗಳನ್ನು ಅವಶ್ಯಕತೆಯಿದ್ದಲ್ಲಿ ಪುನರ್ವಿಂಗಡಿಸಿ ಅಥವಾ ಪುನರ್ಜೋಡಿಸಿ ತೋರಲಾಗಿದೆ.

3. ಸಹಕಾರಿಯ ಕಟ್ಟಡ ನಿಧಿಯ ಆರಂಭಿಕ ಶಿಲ್ಕು ರೂ. 1,30,35,675.99 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭ ದಿಂದ ರೂ. 17,222.13ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ. ಹಾಗೂ ಸಹಕಾರಿ ಸಾಲು ಸನ್ 2022-23ರಲ್ಲಿ ರೂ.12,33,446.00ಗಳನ್ನು ಸಾಲ ಸೌಲಭ್ಯ ಪಡೆದ ಸದಸ್ಯರಿಂದ ಮತ್ತು ಸದಸ್ಯರಿಂದ ನೇರವಾಗಿ ಕಟ್ಟಡ ನಿಧಿಗಾಗಿ ವಂತಿಗೆ ಪಡೆಯಲಾಗಿದ್ದು ಸಾಲಾಂತ್ಯಕ್ಕೆ ಈ ನಿಧಿಯ ಒಟ್ಟು ಮೊತ್ತ ರೂ.1,42,86,344.12 ಗಳಾಗಿರುತ್ತದೆ.

4. ದಾನ/ಧರ್ಮ ನಿಧಿಯ ಆರಂಭಿಕ ಶಿಲ್ಕು ರೂ. 10,20,608.71 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭ ದಿಂದ ರೂ.5,000.00ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ. 31.03.2023ರ ಸಾಲಾಂತ್ಯದ ಜಾತಾ ಶಿಲ್ಕು ರೂ.10,25,608.71ಗಳಾಗಿರುತ್ತವೆ.

5. ಸಹಕಾರಿಯ 31.03.2022ರ ಸಾಲಾಂತ್ಯದ ಜಾತಾ ಲಾಭದಿಂದ ರೂ.3,62,158.00ಗಳನ್ನು ಸೌಹಾರ್ದ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿಗೆ ವಿಲೇವಾರಿಯಾಗಿದ್ದು ಇದನ್ನು ಸಹಕಾರಿ ಸಾಲು ಸನ್ 2022-23ರಲ್ಲಿ ನಿಯಮಾನುಸಾರವಾಗಿ ಸಂಯುಕ್ತ ಸಹಕಾರಿಗೆ ಪಾವತಿಸಲಾಗಿದೆ.

6. ಸಹಕಾರಿಯ ಪ್ರಚಾರ ನಿಧಿಯ ಆರಂಭಿಕ ಜಾತಾ ಶಿಲ್ಕು ರೂ. 5,44,893.12 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭದಿಂದ ರೂ.5,000.00 ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ. ದಿನಾಂಕ:13.06.2022ರ ಆಡಳಿತ ಮಂಡಲಿಯ ವಿಷಯ ಸಂಖ್ಯೆ-12(4) ರಂತೆ, ದಿನಾಂಕ:27.06.2022ರಂದು ಉದಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಬೆಂಗಳೂರು, ಇದರ ರಜತ ಮಹೋತ್ಸವದ ಸ್ಮರಣ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ಜಾಹೀರಾತನ್ನು ನೀಡಲು ರೂ.5000/-ಗಳನ್ನು ಪಾವತಿಸಲಾಗಿದೆ. ಅದರಂತೆಯೇ ದಿನಾಂಕ:30.06.2022ರ ಆಡಳಿತ ಮಂಡಲಿಯ ವಿಷಯ ಸಂಖ್ಯೆ-12(2)ರಂತೆ, ದಿನಾಂಕ:01.07.2022ರಂದು ಕೆ ಆರ್ ಮಾರ್ಕೆಟಿಂಗ್ ರಾಘವನಗರ ಬೆಂಗಳೂರು ಇವರಿಗೆ ಸಹಕಾರಿಯ ಕುರಿತು "Icons of Indian Business" Magzine June 2022, ಇದರಲ್ಲಿ ಒಂದು ಪೂರ್ಣ ಪುಟದಲ್ಲಿ ಜಾಹೀರಾತನ್ನು ಪ್ರಕಟಿಸಲು ರೂ.10,500/- ಗಳನ್ನು ಪಾವತಿಸಲಾಗಿದೆ. 31.03.2023ರ ಸಾಲಾಂತ್ಯಕ್ಕೆ ಈ ನಿಧಿಯ ಒಟ್ಟು ಮೊತ್ತ ರೂ.5,34,393.12 ಗಳಾಗಿರುತ್ತದೆ.

7. ಸಹಕಾರಿಯ ಮೀಸಲು ನಿಧಿಯ ಆರಂಭಿಕ ಜಾತಾ ಶಿಲ್ಕು ರೂ.5,85,77,625.95 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭದಿಂದ ರೂ.45,26,975.00ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ ಮತ್ತು ರೂ.1,32,967.00 ಗಳು ಸದಸ್ಯರು ಕಳೆದ 3 ವರ್ಷಗಳಿಂದ ಪಡೆಯದ ಲಾಭಾಂಶವನ್ನು ಜಮಾಗೊಳಿಸಲಾಗಿದೆ ಹಾಗೂ ರೂ.5,46,801.00ಗಳು ಮೀಸಲು ನಿಧಿ ಠೇವಣಿಗಳ ಮೇಲಿನ ಬಡ್ಡಿಯಾಗಿದ್ದು ಅದನ್ನು ಸಹ ಮೀಸಲು ನಿಧಿಗೆ ಜಮೆ ಮಾಡಲಾಗಿದೆ. ಇದ-ರಿಂದಾಗಿ 31.03.2023ರ ಸಾಲಾಂತ್ಯದ ಈ ನಿಧಿಯ ಒಟ್ಟು ಮೊತ್ತ ರೂ.6,37,84,368.95 ಗಳಾಗಿರುತ್ತದೆ.

8. ಅನಿರೀಕ್ಷಿತ ನಷ್ಟ/ಖರ್ಚು (ಸಾದಿಲ್ವಾರು) ನಿಧಿಯ ಆರಂಭಿಕ ಶಿಲ್ಕು ರೂ.3,77,32,382.75 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭದಿಂದ ರೂ.36,21,580.00ಗಳನ್ನು

ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ. ಇದರಿಂದಾಗಿ 31.03.2023ರ ಸಾಲಾಂತ್ಯದ ಜಾತಾ ಶಿಲ್ಕು ರೂ.4,13,53,962.75 ಗಳಾಗಿರುತ್ತವೆ.

9. ಸಹಕಾರಿಯ ಲಾಭಾಂಶ ಸಮೀಕರಣ ನಿಧಿ ಆರಂಭಿಕ ಶಿಲ್ಕು ರೂ. 24,53,636.68 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭ ದಿಂದ ರೂ.25,000.00ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ. 31.03.2023ರ ಸಾಲಾಂತ್ಯದ ಜಾತಾ ಶಿಲ್ಕು ರೂ.24,78,636.68 ಗಳಾಗಿರುತ್ತವೆ.

10. ಸಹಕಾರಿಯ ಸಾಮಾನ್ಯ ಕ್ಷೇಮ ನಿಧಿಯ ಆರಂಭಿಕ ಶಿಲ್ಕು ರೂ. 93,56,563.79 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭ ದಿಂದ ರೂ.9,05,395ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ ಮತ್ತು ದಿನಾಂಕ:17.10.2022ರಂದು ಸಹಕಾರಿಯ ಸದಸ್ಯರಾದ ಶ್ರೀ.ಅಮರ್‌ನಾಥ್ ಸಿ ಕೆ (ಸದಸ್ಯತ್ವ ಸಂಖ್ಯೆ–100100002125) ಇವರಿಗೆ ಕ್ಯಾನ್ಸರ್ ಖಾಯಿಲೆ ಚಿಕಿತ್ಸೆಗಾಗಿ ರೂ.25,000/– ಗಳನ್ನು ಪಾವತಿಸಲಾಗಿದೆ. ಇದರಿಂದಾಗಿ 31.03.2023ರ ಸಾಲಾಂತ್ಯದ ಜಾತಾ ಶಿಲ್ಕು ರೂ.1,02,36,9 58.79ಗಳಾಗಿರುತ್ತವೆ.

11. ಸಹಕಾರ ಅಕಾಡೆಮಿ (ರಿ), ಮೈಸೂರು, ಇವರಿಗೆ ಸೌಹಾರ್ದ ಸಹಕಾರಿ ಕಾಯ್ದೆಯ ಅನ್ವಯ ಪಾವತಿಸಬೇಕಾಗಿರುವ ಮೊತ್ತವು ಆರಂಭಿಕ ಶಿಲ್ಕು ರೂ.3,64,842.48 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭ ದಿಂದ ರೂ.90,540.00ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ. 31.03.2023ರ ಸಾಲಾಂತ್ಯದ ಜಾತಾ ಶಿಲ್ಕು ರೂ.4,55,382.48 ಗಳಾಗಿರುತ್ತವೆ.

12. ಸಹಕಾರಿಯ ನೌಕರರಿಗೆ ಪ್ರೋತ್ಸಾಹ ಧನ ನಿಧಿಯ ಆರಂಭಿಕ ಶಿಲ್ಕು ರೂ. 1,22,896.00 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭ ದಿಂದ ರೂ.1,50,000.00ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ ಹಾಗೂ ಸಹಕಾರಿ ಸಾಲು ಸನ್ 2022–23ರಲ್ಲಿ ರೂ.1,31,657.00/– ಗಳನ್ನು ಸಹಕಾರಿಯ ನೌಕರರಿಗೆ ಪ್ರೋತ್ಸಾಹ ಧನ ಸಂಬಂಧ ವಿತರಣೆ ಮಾಡಲಾಗಿದ್ದು 31.03.2023ರ ಸಾಲಾಂತ್ಯದ ಜಾತಾ ಶಿಲ್ಕು ರೂ.1,41,239.00.–ಗಳಾಗಿರುತ್ತವೆ.

13. ಮರಣೋತ್ತರ ನಿಧಿಯ ಆರಂಭಿಕ ಶಿಲ್ಕು ರೂ. 3,14,036.46 ಆಗಿದ್ದು ಇದಕ್ಕೆ ಕಳೆದ ಸಾಲಾಂತ್ಯದ ಅಂದರೆ 31.03.2022ರ ಜಾತಾ ಲಾಭದಿಂದ ರೂ.1,00,000.00ಗಳನ್ನು ವಿಲೇವಾರಿ ಮಾಡಿ ಜಮಾಗೊಳಿಸಲಾಗಿದೆ. ಸಹಕಾರಿಯು ಸದಸ್ಯರ ಮರಣೋತ್ತರ ನಿಧಿಯಿಂದ ಸಹಕಾರಿ ಸಾಲು ಸನ್ 2022–23ರಲ್ಲಿ ರೂ. 1,30,000/– ಗಳನ್ನು ವಿತರಿಸಿದ್ದು ಅದರ ವಿವರಣೆ ಈ ಕೆಳಕಂಡಂತಿದೆ:

ಆದ್ದರಿಂದ 31.03.2023ರ ಸಾಲಾಂತ್ಯಕ್ಕೆ ಈ ನಿಧಿಯ ಒಟ್ಟು ಮೊತ್ತ ರೂ.2,84,036.46 ಗಳಾಗಿರುತ್ತದೆ.

| ಕ್ರ. ಸಂ. | ಸದಸ್ಯತ್ವ ಸಂಖ್ಯೆ | ಮರಣ ಹೊಂದಿದ ಸದಸ್ಯರ ಹೆಸರು | ದೇಹಾಂತ್ಯಗೊಂಡ ದಿನಾಂಕ | ವಿತರಣೆಯ ಸೂಕ್ತ ವಿಧಿ ವಿಧಾನ | ವಿತರಿಸಿದ ಮೊಬಲಗು |
|---|---|---|---|---|---|
| 1. | 100100001108 | ಶ್ರೀ. ಸತ್ಯಮೂರ್ತಿ ಎಸ್ ಆರ್ | 02–03–2022 | ದಿನಾಂಕ:19.04.2022, ಆಡಳಿತ ಮಂಡಳಿಯ ಸಭೆ ಸಂಖ್ಯೆ–01, ಠರಾವು ಸಂಖ್ಯೆ–13(1) | 10,000/– |
| 2. | 100100002671 | ಶ್ರೀ. ನಾಗರಾಜ ಎಂ ಎನ್ | 26–03–2022 | ದಿನಾಂಕ:19.04.2022, ಆಡಳಿತ ಮಂಡಳಿಯ ಸಭೆ ಸಂಖ್ಯೆ–01, ಠರಾವು ಸಂಖ್ಯೆ–13(2) | 10,000/– |

| | | | | | |
|---|---|---|---|---|---|
| 3. | 100100000281 | ಶ್ರೀ. ಕೃಷ್ಣಪ್ಪ ಹೆಚ್ | 29-09-2021 | ದಿನಾಂಕ:23.06.2022, ಆಡಳಿತ ಮಂಡಳಿಯ ಸಭೆ ಸಂಖ್ಯೆ-05, ಠರಾವು ಸಂಖ್ಯೆ-12(2) | 10,000/- |
| 4. | 100100000859 | ಶ್ರೀ. ನಂಜಪ್ಪ ರೆಡ್ಡಿ | 20-08-2021 | ದಿನಾಂಕ:29.07.2022, ಆಡಳಿತ ಮಂಡಳಿಯ ಸಭೆ ಸಂಖ್ಯೆ-08, ಠರಾವು ಸಂಖ್ಯೆ-16(1) | 10,000/- |
| 5. | 100100002583 | ಶ್ರೀ. ಪೊನ್ನಪ್ಪ ಕೆ ಎ | 19-08-2022 | ದಿನಾಂಕ:26.09.2022, ಆಡಳಿತ ಮಂಡಳಿಯ ಸಭೆ ಸಂಖ್ಯೆ-12, ಠರಾವು ಸಂಖ್ಯೆ-14(1) | 10,000/- |
| 6. | 100100000561 | ಶ್ರೀ. ವೇಣುಗೋಪಾಲ್ ಪಿ | 05-10-2022 | ದಿನಾಂಕ:08.11.2022, ಆಡಳಿತ ಮಂಡಳಿಯ ಸಭೆ ಸಂಖ್ಯೆ-14, ಠರಾವು ಸಂಖ್ಯೆ-12(2) | 10,000/- |
| 7. | 100100001168 | ಶ್ರೀ. ಚಂದ್ರಶೇಖರ್ ಎಂ ಎಸ್ | 14-08-2022 | ದಿನಾಂಕ:08.11.2022, ಆಡಳಿತ ಮಂಡಳಿಯ ಸಭೆ ಸಂಖ್ಯೆ-14, ಠರಾವು ಸಂಖ್ಯೆ-12(1) | 10,000/- |
| 8. | 100100001817 | ಶ್ರೀ. ಜಯರಾಂ ಸಿಂಗ್ ಬಿ ಜಿ | 04-11-2019 | ದಿನಾಂಕ:13.01.2023, ಆಡಳಿತ ಮಂಡಳಿಯ ಸಭೆ ಸಂಖ್ಯೆ-17, ಠರಾವು ಸಂಖ್ಯೆ-12(1) | 10,000/- |
| 9. | 100100002248 | ಶ್ರೀ. ಬಾಲಪ್ಪ ಎ | 27-10-2021 | ದಿನಾಂಕ:13.01.2023, ಆಡಳಿತ ಮಂಡಳಿಯ ಸಭೆ ಸಂಖ್ಯೆ-17, ಠರಾವು ಸಂಖ್ಯೆ-12(2) | 10,000/- |
| 10. | 100100000647 | ಶ್ರೀ. ಯೋಗೇಂದ್ರ ಜೆ | 01-12-2022 | ದಿನಾಂಕ:13.01.2023, ಆಡಳಿತ ಮಂಡಳಿಯ ಸಭೆ ಸಂಖ್ಯೆ-17, ಠರಾವು ಸಂಖ್ಯೆ-12(3) | 10,000/- |
| 11. | 100100001710 | ಶ್ರೀ. ರಾಜಶೇಖರ ರೆಡ್ಡಿ ಕೆ | 29-10-2022 | ದಿನಾಂಕ:13.01.2023, ಆಡಳಿತ ಮಂಡಳಿಯ ಸಭೆ ಸಂಖ್ಯೆ-17, ಠರಾವು ಸಂಖ್ಯೆ-12(4) | 10,000/- |

| | | | | | |
|---|---|---|---|---|---|
| 12. | 100100003009 | ಶ್ರೀ. ಎಂ ಎಸ್ ನಾಥ್ | 13-09-2022 | ದಿನಾಂಕ:28.01.2023, ಆಡಳಿತ ಮಂಡಳಿಯ ಸಭೆ ಸಂಖ್ಯೆ-18, ಠರಾವು ಸಂಖ್ಯೆ-12(1) | 10,000/- |
| 13. | 100100000467 | ಶ್ರೀ. ರಾಮಪ್ಪ ಕೆ | 27-02-2023 | ದಿನಾಂಕ:28.03.2023, ಆಡಳಿತ ಮಂಡಳಿಯ ಸಭೆ ಸಂಖ್ಯೆ-22, ಠರಾವು ಸಂಖ್ಯೆ-13(1) | 10,000/- |
| | | **ಒಟ್ಟು ಜುಮ್ಲಾ** | | | **1,30,000** |

14. ಎಲ್ಲಾ ಆದಾಯ ಹಾಗೂ ವೆಚ್ಚಗಳನ್ನು ಸಂಚಯನ ಆಧಾರದ (Accrual basis) ಮೇಲೆ ಗುರುತಿಸಿ ಲೆಕ್ಕ ಪತ್ರಗಳಲ್ಲಿ ದಾಖಲಿಸಲಾಗಿದೆ. ಆದರೆ ಸುಸ್ತಿ ಬಾಕಿ ಸಾಲಗಳ ಮೇಲಿನ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ರೂ.96,52,895.00 ಗಳೆಂದು ಗುರುತಿಸಿದ್ದರೂ ಅದನ್ನು ಸನ್ 2022-23ನೇ ಸಾಲಿನ ಆದಾಯವೆಂದು ಪರಿಗಣಿಸದೆ ಅದನ್ನು ಸಂಚಿತ ಆದರೆ ಕೈಸೇರದ ಒಟ್ಟು ಆದಾಯವೆಂದು ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಸೂಕ್ತವಾಗಿ ಪ್ರತಿಬಿಂಬಿಸಲಾಗಿದೆ. ಇದೇ ರೀತಿ ವರದಿ ಸಾಲಿನಲ್ಲಿ ವಸೂಲಾದ ಸುಸ್ತಿ ಬಡ್ಡಿ ರೂ.41,68,192/-ಗಳನ್ನು ಸನ್ 2022-23ನೇ ಸಾಲಿನಲ್ಲಿ ಆದಾಯವೆಂದು ಲಾಭ-ನಷ್ಟ ತಃಖ್ತೆಯಲ್ಲಿ ಸೂಕ್ತವಾಗಿ ಗುರಿತಿಸಲಾಗಿದೆ.

15. ಇದೇ ರೀತಿಯಾಗಿ ಸಹಕಾರಿಯು ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತದೊಂದಿಗೆ ನಿಶ್ಚಿತ ಠೇವಣಿಗಳನ್ನು ಮತ್ತು ಉಳಿತಾಯ ಖಾತೆಯನ್ನು ಹೊಂದಿದ್ದು, ಇವುಗಳಿಂದ ಕಾಲಕಾಲಕ್ಕೆ ಬರುವ ಬಡ್ಡಿ ಆದಾಯವನ್ನು ಗುರುತಿಸಿ ಲೆಕ್ಕ ಪತ್ರಗಳಲ್ಲಿ ದಾಖಲಿಸಲಾಗುತ್ತಿದೆ. ಆದರೆ ಭಾರತೀಯ ರಿಸರ್ವ್ ಬ್ಯಾಂಕ್‌ನವರು ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್ 1949ರ ಸೆಕ್ಷನ್ 35ಎ ಪ್ರಕಾರ ಸದರಿ ಬ್ಯಾಂಕ್ ನೊಂದಿಗಿನ ದೈನಂದಿನ ವಹಿವಾಟುಗಳ ಮೇಲೆ ನಿರ್ಬಂಧವನ್ನು ಹೇರಿರುತ್ತಾರೆ. ಆದುದರಿಂದ ಹಿಂದಿನ ಸಾಲಿನಂತೆ ಪ್ರಸ್ತುತ ಅಂದರೆ 2022-23ನೇ ಸಾಲಿನಲ್ಲಿ ಸದರಿ ಬ್ಯಾಂಕಿನೊಂದಿಗಿನ ನಿಶ್ಚಿತ ಠೇವಣಿಗಳ ಮತ್ತು ಮೀಸಲು ನಿಧಿ ನಿಶ್ಚಿತ ಠೇವಣಿಗಳ ಮೇಲೆ ಬಂದಿರುವ ಬಡ್ಡಿಯ ಮೊತ್ತವಾದ ರೂ.90,01,594/-ರಷ್ಟನ್ನು ಸಹಕಾರಿಯ ಸನ್ 2022-23ರ ಲೆಕ್ಕಪತ್ರಗಳಲ್ಲಿ "ದ್ರವೀಕರಿಸಲಾಗದ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ" ಎಂದು ಸೂಕ್ತವಾಗಿ ನಮೂದಿಸಲಾಗಿರುತ್ತದೆ. ಈ ಮೇಲೆ ಹೇಳಿದಂತೆಯೇ ಉಳಿತಾಯ ಖಾತೆಯಿಂದ ಬಂದಿರುವ ಬಡ್ಡಿಯ ಮೊತ್ತದಲ್ಲಿ ರೂ.19,58,635/- ರಷ್ಟನ್ನು "ದ್ರವೀಕರಿಸಲಾಗದ ಉಳಿತಾಯ ಖಾತೆಗಳ ಮೇಲಿನ ಬಡ್ಡಿ" ಎಂದು ಸನ್ 2022-23ನೇ ಸಾಲಿನ ಆದಾಯಗಳೆಂದು ಪರಿಗಣಿಸದೆ ಅದನ್ನು ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಸೂಕ್ತವಾಗಿ ಪ್ರತಿಬಿಂಬಿಸಲಾಗಿದೆ.

16. ಚರಾಸ್ತಿಗಳ ಮೇಲಿನ ರೂ.2,39,563/-ಗಳ ಸವಕಳಿಯನ್ನು ಆದಾಯ ತೆರಿಗೆ ಅಧಿನಿಯಮ 1962ರ ಪ್ರಕಾರ ಸವಕಳಿ ನಂತರದ ಜಾತಾ ಮೌಲ್ಯ ವಿಧಾನದಲ್ಲಿ (WDV Method) ಲೆಕ್ಕಾಚಾರ ಮಾಡಿ ನಿರ್ಧರಿಸಲಾಗಿದೆ. ಜಾತಾ ಮೌಲ್ಯ ವಿಧಾನದಲ್ಲಿ ಲೆಕ್ಕಾಚಾರ ಮಾಡುವಾಗ ಫೈರ್ ಎಕ್ಸ್ಟಿಂಗ್ವಿಷರ್‌ನ ಸವಕಳಿಯನ್ನು ಹೊರತುಪಡಿಸಲಾಗಿದೆ (ಏಕೆಂದರೆ ಈ ಉಪಕರಣದ ಉಪಯುಕ್ತ ಜೀವಿತಾವಧಿಯು ಮೂರು ವರ್ಷಗಳು ಮಾತ್ರ ಆಗಿರುವುದರಿಂದ). ಇದರ ವಿವರ ಈ ಕೆಳಗೆ ನೀಡಲಾಗಿದೆ.

| ಕ್ರ. ಸಂ. | ಚರಾಸ್ತಿಯ ವಿವರ | ಸವಕಳಿ ದರ |
|---|---|---|
| 1 | ಕಛೇರಿ ಉಪಕರಣಗಳು, ಪೀಠೋಪಕರಣಗಳು | 10% |
| 2 | ಗಣಕಯಂತ್ರ | 40% |
| 3 | ದೂರವಾಣಿ ಮತ್ತು ಉಪಕರಣಗಳು | 10% |
| 4 | ಏರ್ ಕಂಡೀಷನರ್ | 15% |
| 5 | ಯು ಪಿ ಎಸ್ ಮತ್ತು ಜನರೇಟರ್ | 15% |
| 6 | ಭದ್ರತಾ ಎಚ್ಚರಿಕೆ ವ್ಯವಸ್ಥೆ | 10% |
| 7 | ಭದ್ರತಾ ಕಪಾಟುಗಳು | 10% |
| 8 | ಸಿ ಸಿ ಟಿ ವಿ | 10% |
| 9 | ವಾಹನಗಳು | 15% |
| 10 | ಫೈರ್ ಎಕ್ಸ್ಟಿಂಗ್ವಿಷರ್ | 33.33% |
| 11 | ವುಡ್ ವರ್ಕ ಪಾರ್ಟಿಶನ್ಸ್ | 10% |

17. ಹಳೆಯ ಯು.ಪಿ.ಎಸ್ ಮತ್ತು ಬ್ಯಾಟರಿಗಳನ್ನು ವಿಲೇವಾರಿ ಮಾಡಲಾಗಿದ್ದು ಈ ಸಂಬಂಧ ರೂ.27,549/– ಗಳ ಮೊತ್ತದ ನಷ್ಟವನ್ನು ಸಹಕಾರಿಯ ಲೆಕ್ಕ ಪತ್ರಗಳಲ್ಲಿ ಸೂಕ್ತವಾಗಿ ನಮೂದಿಸಿ ದಾಖಲಿಸಲಾಗಿದೆ.

